# ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ (ಎನ್.ಎಫ್.ಎಸ್.ಎಂ)

# (National Food Security Mission-NFSM)

## 2015–16 ನೇ ಸಾಲಿನ ಕಾರ್ಯಕ್ರಮ

ಹನ್ನೆರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಭತ್ತ, ಒರಟು ಧಾನ್ಯಗಳು, ದ್ವಿದಳ ಧಾನ್ಯಗಳು ಮತ್ತು ವಾಣಿಜ್ಯ ಬೆಳೆಗಳ ಉತ್ಪಾದನೆಯನ್ನು ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವ ಉದ್ದೇಶದಿಂದ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನದಡಿ ಎನ್.ಎಫ್.ಎಸ್.ಎಂ–ಅಕ್ಕಿ ಮತ್ತು ಎನ್.ಎಫ್.ಎಸ್.ಎಂ– ದ್ವಿದಳಧಾನ್ಯ ಮತ್ತು ಎನ್.ಎಫ್.ಎಸ್.ಎಂ–ಒರಟು ಧಾನ್ಯಗಳು ಯೋಜನೆಗಳನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. **2015–16 ನೇ ಸಾಲಿನಲ್ಲಿ ಎನ್.ಎಫ್.ಎಸ್.ಎಂ ಯೋಜನೆಯನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಡುವೆ ಶೇ.50:50 ರ ಹಂಚಿಕೆ ಅನುಪಾತದಲ್ಲಿ ಅನುಷ್ಟಾನಗೊಳಿಸಲಾಗುತ್ತಿದೆ.**

**ಯೋಜನೆಯ ಪ್ರಮುಖ ಉದ್ದೇಶಗಳು:**

1) ಆಯ್ಕೆ ಮಾಡಿರುವ ಜಿಲ್ಲೆಗಳಲ್ಲಿ ಅಕ್ಕಿ, ದ್ವಿದಳ ಧಾನ್ಯಗಳು, ಒರಟು ಧಾನ್ಯಗಳು ಮತ್ತು ವಾಣಿಜ್ಯ ಬೆಳೆಗಳಲ್ಲಿ (ಹತ್ತಿ & ಕಬ್ಬು) ಕ್ಷೇತ್ರ ವಿಸ್ತೀರ್ಣ ಹಾಗೂ ಉತ್ಪಾದಕತೆ ಹೆಚ್ಚು ಮಾಡುವ ಮುಖಾಂತರ ಹೆಚ್ಚು ಉತ್ಪಾದನೆಯನ್ನು ಸಾಧಿಸುವುದು.
2) ಕ್ಷೇತ್ರ ಮಟ್ಟದಲ್ಲಿ ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತೆಯನ್ನು ಸ್ಥಿರಗೊಳಿಸುವುದು.
3) ಕ್ಷೇತ್ರಮಟ್ಟದಲ್ಲಿ ಕೃಷಿ ಆದಾಯ ಹೆಚ್ಚಿಸುವುದರ ಮೂಲಕ ರೈತರಲ್ಲಿ ಆತ್ಮ ವಿಶ್ವಾಸವನ್ನು ಮೂಡಿಸುವುದು.

**ಈ ಯೋಜನೆಗಳ ಕಾರ್ಯಕ್ಷೇತ್ರ (Area of Operation):**

| ಕ್ರ.ಸಂ | ಯೋಜನೆ | ಅನುಷ್ಠಾನಗೊಳಿಸಬೇಕಾದ ಜಿಲ್ಲೆಗಳು |
|---|---|---|
| 1 | ಎನ್.ಎಫ್.ಎಸ್.ಎಂ (ಅಕ್ಕಿ) | ಬೆಳಗಾವಿ, ದಕ್ಷಿಣ ಕನ್ನಡ, ಹಾವೇರಿ, ಶಿವಮೊಗ್ಗ, ಉಡುಪಿ, ಉತ್ತರಕನ್ನಡ, ಯಾದಗೀರ್ |
| 2 | ಎನ್.ಎಫ್.ಎಸ್.ಎಂ (ದ್ವಿದಳಧಾನ್ಯ) | ಬಾಗಲಕೋಟೆ, ಬೆಂಗಳೂರು(ನಗರ), ಬೆಂಗಳೂರು (ಗ್ರಾ), ಬೆಳಗಾವಿ, ಬಳ್ಳಾರಿ, ಬೀದರ್, ವಿಜಯಪುರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಕ್ಷಿಣ ಕನ್ನಡ, ದಾವಣಗೆರೆ, ಧಾರವಾಡ, ಗದಗ, ಕಲಬುರಗಿ, ಹಾಸನ, ಹಾವೇರಿ, ಕೊಡಗು, ಕೋಲಾರ, ಕೊಪ್ಪಳ, ಮಂಡ್ಯ, ಮೈಸೂರು, ರಾಯಚೂರು, ರಾಮನಗರ, ಶಿವಮೊಗ್ಗ, ತುಮಕೂರು, ಉಡುಪಿ, ಉತ್ತರ ಕನ್ನಡ, ಯಾದಗೀರ್ |
| 3 | ಎನ್.ಎಫ್.ಎಸ್.ಎಂ (ಒರಟುಧಾನ್ಯಗಳು) | ಬಾಗಲಕೋಟೆ, ಬೆಳಗಾವಿ, ಬಳ್ಳಾರಿ, ವಿಜಯಪುರ, ಚಿತ್ರದುರ್ಗ, ದಾವಣಗೆರೆ, ಕಲಬುರಗಿ, ಹಾವೇರಿ, ಕೊಪ್ಪಳ ರಾಯಚೂರು, ತುಮಕೂರು ಹಾಗೂ ಚಿಕ್ಕಬಳ್ಳಾಪುರ |

**ಜಿಲ್ಲೆಗಳ ಆಯ್ಕೆಗೆ ಅನುಸರಿಸಲಾಗುವ ಮಾನದಂಡಗಳು (Criteria for selection of districts):**

1) ಭತ್ತದ ಬೆಳೆಯ ಕ್ಷೇತ್ರ ವಿಸ್ತೀರ್ಣವು 50000 ಹೆಕ್ಟೇರ್‌ಗಿಂತ ಹೆಚ್ಚು ಇದ್ದು ಇಳುವರಿ/ ಉತ್ಪಾದಕತೆಯಲ್ಲಿ ರಾಜ್ಯ ಸರಾಸರಿ ಇಳುವರಿಗಿಂತ ಕಡಿಮೆ ಇರುವ ಜಿಲ್ಲೆಗಳನ್ನು ಎನ್.ಎಫ್.ಎಸ್.ಎಂ–ಭತ್ತ ಯೋಜನೆಯಡಿ ಆಯ್ಕೆ ಮಾಡಲಾಗುವುದು.

2) 11 ನೇ ಪಂಚವಾರ್ಷಿಕ ಯೋಜನೆಯಡಿ ಆಯ್ಕೆಗೊಂಡಿದ್ದ 16 ರಾಜ್ಯಗಳ ಎಲ್ಲಾ ಜಿಲ್ಲೆಗಳನ್ನು 12 ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲೂ ಮುಂದುವರೆಸಲಾಗಿದೆ.

**ಕಾರ್ಯಕ್ರಮ ಅನುಮೋದನೆ ಹಾಗೂ ಅನುಷ್ಠಾನ ಪ್ರಕ್ರಿಯೆ (Procedure for approval and Implementation):**

ಕೇಂದ್ರ ಕೃಷಿ ಮತ್ತು ಸಹಕಾರ ಇಲಾಖೆ, ಭಾರತ ಸರ್ಕಾರ ಇವರಿಂದ ಪ್ರತಿ ರಾಜ್ಯಕ್ಕೆ ತಾತ್ಕಾಲಿಕ ಕಾರ್ಯಕ್ರಮವನ್ನು ನೀಡುತ್ತಾ ವಾರ್ಷಿಕ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುವಂತೆ ತಿಳಿಸಲಾಗುತ್ತದೆ. ಕಾರ್ಯಕ್ರಮದಲ್ಲಿ ಸೂಚಿಸಲಾದ ಮಾರ್ಗಸೂಚಿಗಳನ್ನು ಹಾಗೂ ಆಯಾ ಬೆಳೆಗಳಲ್ಲಿ ಜಿಲ್ಲೆಯ ಆದ್ಯತೆ ಮತ್ತು ಸಾಮರ್ಥ್ಯತೆಯನ್ನು ಪರಿಗಣನೆಯಲ್ಲಿರಿಸಿ ಜಿಲ್ಲಾ ಮಟ್ಟದ ಆಹಾರ ಭದ್ರತಾ ಅಭಿಯಾನದ ಕಾರ್ಯಕಾರಿ ಸಮಿತಿಯು ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ರಾಜ್ಯ ಅಭಿಯಾನ ನಿರ್ದೇಶಕರಿಗೆ ಸಲ್ಲಿಸುವುದು.

ಜಿಲ್ಲೆಗಳ ಕ್ರಿಯಾ ಯೋಜನೆಗಳನ್ನು ಪರಿಗಣನೆಯಲ್ಲಿರಿಸಿ ಸಿದ್ಧಪಡಿಸಲಾಗುವ ರಾಜ್ಯ ಕ್ರಿಯಾ ಯೋಜನೆಗೆ ರಾಜ್ಯ ಮಟ್ಟದ ಆಹಾರ ಭದ್ರತಾ ಅಭಿಯಾನದ ಕಾರ್ಯಕಾರಿ ಸಮಿತಿಯ ಅನುಮೋದನೆ ಪಡೆದ ನಂತರ ಕ್ರಿಯಾ ಯೋಜನೆಯನ್ನು ಕೇಂದ್ರ ಆಹಾರ ಭದ್ರತಾ ಅಭಿಯಾನದ ಕಾರ್ಯಕಾರಿ ಸಮಿತಿಯ ಅನುಮೋದನೆಗಾಗಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುವುದು. ಕ್ರಿಯಾಯೋಜನೆಯೊಂದಿಗೆ ಹಿಂದಿನ ವರ್ಷದಲ್ಲಿ ಅನುಷ್ಠಾನಗೊಳಿಸಲಾದ ಸದರಿ ಯೋಜನೆಯ ಪ್ರಗತಿ ವಿವರ, ನೂತನ ಅವಿಷ್ಕಾರಗಳು, ಫಲಶ್ರುತಿ, ಅನುಭವ, ಯಶೋಗಾಥೆಗಳ ವಿವರಗಳನ್ನು ಸಹ ಸಲ್ಲಿಸಲಾಗುವುದು.

ಯೋಜನೆಯಡಿ ರಾಜ್ಯಕ್ಕೆ ಹಂಚಿಕೆಯಾಗಿರುವ ಒಟ್ಟಾರೆ ಅನುದಾನದಲ್ಲಿ ಜಿಲ್ಲೆಗಳ ಸ್ಥಳೀಯ ಅವಶ್ಯಕತೆಗಳನ್ನಾಧರಿಸಿ ಶೇ.20ರಷ್ಟು ಅನುದಾನಕ್ಕೆ ಘಟಕ ಪರಿವರ್ತನೆಗೆ ಅನುಮೋದನೆ ನೀಡಲು ರಾಜ್ಯ ಮಟ್ಟದ ಆಹಾರ ಭದ್ರತಾ ಅಭಿಯಾನದ ಕಾರ್ಯಕಾರಿ ಸಮಿತಿಗೆ ಅಧಿಕಾರವಿರುತ್ತದೆ.

**ಉಸ್ತುವಾರಿ (Monitoring Mechanism):**

ಅಭಿಯಾನವು ಅನುಷ್ಠಾನ ಸಂಸ್ಥೆ ಮತ್ತು ಸಹ ಇಲಾಖೆಗಳ ಸಹಯೋಗದೊಂದಿಗೆ ಯೋಜನೆಯ ಅನುಷ್ಠಾನದ ಉಸ್ತುವಾರಿ ಮತ್ತು ಮೌಲ್ಯಮಾಪನವನ್ನು ಕೈಗೊಳ್ಳುವಲ್ಲಿ ತೀಕ್ಷ್ಣವಾದ ತಂತ್ರವನ್ನು ಪಾಲಿಸುತ್ತದೆ.

ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಮಟ್ಟದ ಆಹಾರ ಭದ್ರತಾ ಅಭಿಯಾನದ ಕಾರ್ಯಕಾರಿ ಸಮಿತಿಯು ಜಿಲ್ಲೆಯ ಯೋಜನಾ ನಿರ್ವಹಣಾ ತಂಡದ ನೆರವಿನೊಂದಿಗೆ ಉಸ್ತುವಾರಿ ಕೈಗೊಳ್ಳವುದು. ಯೋಜನೆಯಡಿ ವಿವಿಧ ಕಾರ್ಯಕ್ರಮಗಳ ಭೌತಿಕ ಮತ್ತು ಆರ್ಥಿಕ ಗುರಿಯನ್ವಯ ಉಸ್ತುವಾರಿಯನ್ನು ನಿಗದಿತ ನಮೂನೆಯಲ್ಲಿ ಉಸ್ತುವಾರಿ ತಂಡಗಳು ಕೈಗೊಳ್ಳುತ್ತವೆ.

ರಾಜ್ಯಮಟ್ಟದಲ್ಲಿ ರಾಜ್ಯ ಅಭಿಯಾನ ನಿರ್ದೇಶಕರ ಅಧ್ಯಕ್ಷತೆಯಲ್ಲಿ–ಸಹ ಇಲಾಖೆಗಳು, ಕೃ.ವಿ.ವಿ.ಗಳು, ಲೀಡ್ ಬ್ಯಾಂಕ್, NABARD, ICAR ಸಂಸ್ಥೆಗಳು ಮತ್ತು ಕೇಂದ್ರ ಬೆಳೆ ಅಭಿವೃದ್ಧಿ ನಿರ್ದೇಶನಾಲಯದ ಸದಸ್ಯರನ್ನೊಳಗೊಂಡ ಸಮಿತಿಯು ಅಭಿಯಾನದ ಚಟುವಟಿಕೆಗಳ ಉಸ್ತುವಾರಿಯನ್ನು ಕೈಗೊಳ್ಳುತ್ತವೆ.

ಪ್ರತಿ ರಾಜ್ಯಕ್ಕೆ ನಿಯೋಜಿಸಲ್ಪಡುವ ರಾಷ್ಟ್ರ ಮಟ್ಟದ ಉಸ್ತುವಾರಿ ಸಮಿತಿಯು ರಾಜ್ಯಗಳ ಉಸ್ತುವಾರಿಯನ್ನು ಕೈಗೊಳ್ಳುತ್ತವೆ.

**ವರದಿ ಮಾಡುವಿಕೆ (Reporting):**

ಯೋಜನೆಯನ್ನು ಅನುಷ್ಠಾನಗೊಳಿಸುವ ಸಂಸ್ಥೆಗಳು ಪ್ರಗತಿ ವರದಿಯನ್ನು ತ್ರೈಮಾಸಿಕಕ್ಕೊಮ್ಮೆ ತ್ರೈಮಾಸಿಕ ಮುಗಿದ ನಂತರದ ತಿಂಗಳ 15ನೇ ತಾರೀಖಿನೊಳಗೆ ಮತ್ತು ವಿವರವಾದ ವಾರ್ಷಿಕ ಪ್ರಗತಿ ವರದಿಯನ್ನು ಆರ್ಥಿಕ ವರ್ಷ ಮುಗಿದ ನಂತರ ಏಪ್ರಿಲ್ 30 ರೊಳಗೆ ನಿಗದಿಪಡಿಸಿದ ನಮೂನೆಯಲ್ಲಿ

ರಾಷ್ಟ್ರೀಯ ಅಭಿಯಾನ ನಿರ್ದೇಶಕರು, ಭಾರತ ಸರ್ಕಾರ, ಕೃಷಿ ಮತ್ತು ಸಹಕಾರ ಮಂತ್ರಾಲಯ, ನವದೆಹಲಿ ಇವರಿಗೆ ಮತ್ತು ಸಂಬಂಧಪಟ್ಟ ಬೆಳೆ ಅಭಿವೃದ್ಧಿ ನಿರ್ದೇಶನಾಲಯಗಳಿಗೆ ಸಲ್ಲಿಸುವುದು.

**ಮೌಲ್ಯಮಾಪನ (Evaluation):**

–ರೈತರ ಸಂಪನ್ಮೂಲಗಳನ್ನು ಮತ್ತು ಬೆಳೆ ಉತ್ಪಾದನೆ ಮಟ್ಟವನ್ನು ತಿಳಿಯಲು ಮೂಲ ಮಟ್ಟದ ಸರ್ವೆಕ್ಷಣೆ ನಡೆಸಲಾಗವುದು.

–ಯೋಜನೆಯ ಉದ್ದೇಶ ಮತ್ತು ರೂಪಿಸಲಾದ ವಾರ್ಷಿಕ ಕ್ರಿಯಾ ಯೋಜನೆಯನ್ವಯ ಸಾಧಿಸಿರುವ ಪ್ರಗತಿಯನ್ನು ಮೌಲ್ಯಮಾಪನ ಮಾಡಲು ಪ್ರತಿ ವರ್ಷ ಮೌಲ್ಯಮಾಪನ ಕೈಗೊಳ್ಳಲಾಗುವುದು.

–ಅನುಷ್ಠಾನದ ಮೂರನೆಯ ವರ್ಷದಲ್ಲಿ ಸ್ವತಂತ್ರ ಸಂಸ್ಥೆಯಿಂದ ಮಧ್ಯಂತರ ಮೌಲ್ಯಮಾಪನ ಕೈಗೊಳ್ಳುವ ಮೂಲಕ ಯೋಜನೆಯ ಯಶಸ್ಸು ಮತ್ತು ನ್ಯೂನತೆಗಳ ಮಾಹಿತಿಯನ್ನು ಕಲೆಹಾಕಿ ಅನುಷ್ಠಾನದಲ್ಲಿ ಅವಶ್ಯ ತಿದ್ದುಪಡಿ/ ಬದಲಾವಣೆಗಳನ್ನು ಅಳವಡಿಸಲಾಗುವುದು.

–ಭತ್ತ ಮತ್ತು ದ್ವಿದಳ ಧಾನ್ಯ ಬೆಳೆಯ ಉತ್ಪಾದನೆ ಹೆಚ್ಚಿಸುವಲ್ಲಿ ಯೋಜನೆಯಲ್ಲಿನ ಘಟಕಗಳು ವಹಿಸಿದ ಪಾತ್ರ, ಫಲಶೃತಿ ಮತ್ತು ರೈತರ ಆದಾಯದ ಹೆಚ್ಚಳದ ಮೇಲೆ ಯೋಜನೆ ಬೀರಿದ ಪರಿಣಾಮ ತಿಳಿಯಲು ಮೂರು ವರ್ಷಗಳ ನಂತರ ಸ್ವತಂತ್ರ ಸಂಸ್ಥೆಯಿಂದ ಮೌಲ್ಯಮಾಪನ ಮಾಡಿಸಲಾಗುವುದು.

–ಅಭಿಯಾನದಡಿ ವರದಿ ಮಾಡುವಿಕೆ, ಉಸ್ತುವಾರಿ ಮತ್ತು ಮೌಲ್ಯಮಾಪನವನ್ನು ಮಾಹಿತಿ ಸಂವಹನ ತಂತ್ರಜ್ಞಾನ (Information Communication Technology- ICT) ಮೂಲಕ ವಿಶೇಷ ಸಾಫ್ಟ್‌ವೇರ್ ಬಳಸಿ ಈಗಾಗಲೇ ಮಾಡಲಾಗುತ್ತಿದೆ.

**ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರಗಳು (Role of Panchayath Raj Institutions):**

ಪಂಚಾಯತ್ ರಾಜ್ ಸಂಸ್ಥೆಗಳನ್ನು ಫಲಾನುಭವಿಗಳ ಆಯ್ಕೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲಾಗುವುದು.

**ಫಲಾನುಭವಿಗಳು ಮತ್ತು ಕ್ಷೇತ್ರ ಆಯ್ಕೆಗೆ ಮಾನದಂಡಗಳು:**

–ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯ ಅನುಷ್ಠಾನ ಕುರಿತು ಭಾರತ ಸರ್ಕಾರದ ನಿರ್ಣಯದಂತೆ ಯೋಜನೆಯ ಒಟ್ಟಾರೆ ಅನುದಾನದಲ್ಲಿ ವಿಶೇಷ ಘಟಕ ಯೋಜನೆಗೆ ಶೇ.16. ಮತ್ತು ಗಿರಿಜನ ಉಪಯೋಜನೆಗೆ ಶೇ.8 ರಷ್ಟು ಅನುದಾನವನ್ನು ಮೀಸಲಿರಿಸುವುದು. ಆಯಾ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನಸಂಖ್ಯೆಯನ್ನಾಧರಿಸಿ ಅನುದಾನವನ್ನು ನಿಗದಿಪಡಿಸುವುದು.

–ಸಣ್ಣ ಮತ್ತು ಅತಿ ಸಣ ರೈತರಿಗೆ ಅನುದಾನದ ಕನಿಷ್ಟ ಶೇ.33 ರಷ್ಟನ್ನು ಮೀಸಲಿರಿಸುವುದು.

–ಮಹಿಳಾ ರೈತರಿಗೆ ಅನುದಾನದ ಕನಿಷ್ಟ ಶೇ.30 ರಷ್ಟನ್ನು ಮೀಸಲಿರಿಸುವುದು.

– ಒಂದು ಹಂಗಾಮಿನಲ್ಲಿ ಯೋಜನೆಯ ವಿವಿಧ ಘಟಕಗಳಡಿ ಸಹಾಯಾನುದಾನವನ್ನು ಪಡೆಯಲು ಎಲ್ಲಾ ವರ್ಗದ ರೈತರಿಗೂ 5 ಹೆಕ್ಟೇರ್‌ಗಳವರೆಗೆ ಕ್ಷೇತ್ರ ವಿಸ್ತೀರ್ಣವನ್ನು ಮಿತಿಗೊಳಿಸಲಾಗಿರುತ್ತದೆ.

– ಅಧ್ಯಕ್ಷರು, ಜಿಲ್ಲಾ ಮಟ್ಟದ ಆಹಾರ ಭದ್ರತಾ ಅಭಿಯಾನ ಕಾರ್ಯಕಾರಿ ಸಮಿತಿ ಇವರಿಂದ ರಚಿಸಲ್ಪಟ್ಟ ಬೀಜ ಸಮಿತಿಯು ಜಿಲ್ಲೆಯಲ್ಲಿ ಬಂದಿರುವ ಬೀಜ ಬೇಡಿಕೆ, ವಿತರಣೆ ಮತ್ತು ಫಲಾನುಭವಿಗಳ ಪಟ್ಟಿಯನ್ನು ಪರಿಶೀಲಿಸುವುದು. ಬಿತ್ತನೆ ಬೀಜ ಸಹಾಯಾನುದಾನವು ಕೇಂದ್ರ ಮಟ್ಟದಲ್ಲಿ

ವಿತರಣೆಯಾಗಿದ್ದಲ್ಲಿ ವಿತರಣೆಯ ನಂತರ ಫಲಾನುಭವಿಗಳ ಪಟ್ಟಿಯನ್ನು ಐಚ್ಛಿಕವಾಗಿ ಪರಿಶೀಲಿಸಿ ಅನುಮೋದಿಸುವುದು.

–ಪ್ರಾತ್ಯಕ್ಷಿಕೆಗಳು, ರೈತ ತರಬೇತಿಗಳನ್ನು ಏರ್ಪಡಿಸುವುದು ಮತ್ತು ಮೌಲ್ಯಮಾಪನವನ್ನು ಕೈಗೊಳ್ಳುವಲ್ಲಿ ಕೃ.ವಿ.ವಿಯ ವಲಯ ಸಂಶೋಧನಾ ಕೇಂದ್ರಗಳು, ಕೆ.ವಿ.ಕೆಗಳು, ATMA, NGOಗಳು ಮತ್ತು ಸಹ ಇಲಾಖೆಗಳೂ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಕ್ರಮ ವಹಿಸುವುದು.

–ಜಿಲ್ಲಾ ಮಟ್ಟದ ಯೋಜನಾ ನಿರ್ವಹಣೆ ತಂಡವು ಸಂಶೋಧನಾ ಕೇಂದ್ರಗಳು ಮತ್ತು ಸಹ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಉದ್ದೇಶಿತ ಫಲಿತಾಂಶವನ್ನು ಪಡೆಯಲು ಸಹಕರಿಸುವುದು.

**2015–16 ನೇ ಸಾಲಿನಲ್ಲಿ ರಾಷ್ಟ್ರೀಯ ಆಹಾರ ಭದ್ರತಾ ಯೋಜನೆ ಅಡಿಯಲ್ಲಿ ಅನುಸರಿಸಬೇಕಾದ ಪ್ರಮುಖ ಘಟಕಗಳ ಮಾರ್ಗಸೂಚಿಗಳು ಈ ಕೆಳಗಿನಂತಿರುತ್ತವೆ.**

## ಎನ್.ಎಫ್.ಎಸ್.ಎಂ(ಅಕ್ಕಿ) ಮತ್ತು (ದ್ವಿದಳ ಧಾನ್ಯಗಳು)

### ಪ್ರಾತ್ಯಕ್ಷಿಕೆಗಳು:

- ಅಕ್ಕಿ ಮತ್ತು ದ್ವಿದಳ ಧಾನ್ಯ ಬೆಳೆಗಳಲ್ಲಿ ನೂತನ/ಸುಧಾರಿತ ಬೇಸಾಯ ಕ್ರಮಗಳನ್ನು ಅಳವಡಿಸಿ ಏಕ ಬೆಳೆ ಮತ್ತು ಬೆಳೆ ಪದ್ಧತಿ ಆಧಾರಿತ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳುವುದು.
- ಶೇ.30 ರಷ್ಟು ಪ್ರಾತ್ಯಕ್ಷಿಕೆಗಳನ್ನು ಬೆಳೆ ಆಧಾರಿತ ಪದ್ಧತಿಗಳ ಮೇಲೆ ಆಯೋಜಿಸುವುದು. ಬೆಳೆ ಪದ್ಧತಿ ಪ್ರಾತ್ಯಕ್ಷಿಕೆಯಲ್ಲಿ ಬೆಳೆಗಳನ್ನು ಅನುಕ್ರಮವಾಗಿ ಅದೇ ತಾಕಿನಲ್ಲಿ ಬೆಳೆಯುವುದು.
- ಪ್ರತಿ ಬೆಳೆಯ ಪ್ರಾತ್ಯಕ್ಷಿಕೆಗಳನ್ನು ಕನಿಷ್ಠ 100 ಹೆಕ್ಟೇರ್ ಪ್ರದೇಶದಲ್ಲಿ ಕೈಗೊಳ್ಳುವುದು ಹಾಗೂ ಗುಚ್ಛ ಪ್ರಾತ್ಯಕ್ಷಿಕೆಯ (Cluster Demonstrations) ಪದ್ಧತಿಯಲ್ಲಿ ಏರ್ಪಡಿಸುವುದು.
- ಪ್ರಾತ್ಯಕ್ಷಿಕೆ ಆಯೋಜನೆಯಲ್ಲಿ ಗ್ರಾಮ ಪಂಚಾಯತಿಯ ಸಹಕಾರದೊಂದಿಗೆ ಫಲಾನುಭವಿ ರೈತರನ್ನು ಆಯ್ಕೆ ಮಾಡುವುದು.
- ಪ್ರಾತ್ಯಕ್ಷಿಕೆಯನ್ನು ಆಯೋಜಿಸುವಾಗ 50 ಹೆಕ್ಟೇರ್ ಪ್ರದೇಶವನ್ನು ಎರಡು ಭಾಗಗಳಾಗಿ ವಿಂಗಡಿಸಿ ಒಂದು ಭಾಗದಲ್ಲಿ ಸುಧಾರಿತ ತಾಂತ್ರಿಕತೆಗಳನ್ನು ಅಳವಡಿಸುವುದು; ಮತ್ತೊಂದು ಭಾಗದಲ್ಲಿ ರೈತರು ಅಳವಡಿಸುವ ಪದ್ಧತಿಗಳೊಂದಿಗೆ ಚೆಕ್ ಪ್ಲಾಟ್ ಆಗಿ ನಿರ್ವಹಿಸುವುದು. ಕಡಿಮೆ ಇಳುವರಿ ಪ್ರದೇಶಗಳಿಗೆ ಆದ್ಯತೆ ನೀಡುವುದು.
- ಒಂದು ಗುಚ್ಛ ಪ್ರದೇಶದಲ್ಲಿ ಒಳಪಡುವ ಎಲ್ಲಾ ರೈತರನ್ನು ಪ್ರಾತ್ಯಕ್ಷಿಕೆಯಲ್ಲಿ ತೊಡಗಿಸುವುದು. ಪ್ರತಿ ರೈತನ ಕನಿಷ್ಠ 0.4 ಹೆ ಪ್ರದೇಶವನ್ನು ಗುಚ್ಛದಲ್ಲಿ ಸೇರ್ಪಡೆಗೊಳಿಸುವುದು.
- ಅಕ್ಕಿ ಬೆಳೆಯಲ್ಲಿ ನೇರ ಬಿತ್ತನೆ/ ಸಾಲು ನಾಟಿ/ SRI (ಜಿಲ್ಲೆಯ ಪ್ರತಿಶತ 1.5 ರಷ್ಟು ಅಕ್ಕಿ ಬೆಳೆ ಪ್ರದೇಶದಲ್ಲಿ) ಪ್ರಾತ್ಯಕ್ಷಿಕೆ, ಸಂಕರಣ ಅಕ್ಕಿ ಪ್ರಾತ್ಯಕ್ಷಿಕೆಗಳನ್ನು (ಜಿಲ್ಲೆಯ ಪ್ರತಿಶತ 1.5 ರಷ್ಟು ಅಕ್ಕಿ ಬೆಳೆ ಪ್ರದೇಶದಲ್ಲಿ) ಮತ್ತು ಭತ್ತದ ಬದುವಿನ ಮೇಲೆ ತೊಗರಿ ಬೆಳೆ ಪ್ರಾತ್ಯಕ್ಷಿಕೆಗಳನ್ನು ಹಮ್ಮಿಕೊಳ್ಳುವುದು.
- ಬೆಳೆ ಪದ್ಧತಿ ಆಧಾರಿತ (Cropping System Based) ಪ್ರಾತ್ಯಕ್ಷಿಕೆಗಳನ್ನು ಮಳೆಯಾಶ್ರಿತ ಪ್ರದೇಶದಲ್ಲಿ ನೇರ ಭತ್ತ ಬಿತ್ತನೆ ನಂತರ ಕಡಲೆ ಬೆಳೆಯನ್ನು ಅನುಕ್ರಮ(sequence) ಪದ್ಧತಿಯಲ್ಲಿ ಬೆಳೆಯುವ ಬಗ್ಗೆ ಹಾಗೂ ನೀರಾವರಿ ಪ್ರದೇಶದಲ್ಲಿ ಭತ್ತದ ಬೆಳೆಯ ನಂತರ ಅಲಸಂದೆ /ಕಡಲೆ/ ಚನ್ನಂಗಿ/ ಹೆಸರು/ ಉದ್ದು ಬೆಳೆಗಳನ್ನು ಅನುಕ್ರಮ ಪದ್ಧತಿಯಲ್ಲಿ ಬೆಳೆಯುವ ಬಗ್ಗೆ ಆಯೋಜಿಸುವುದು

- ದ್ವಿದಳಧಾನ್ಯಗಳಲ್ಲಿ ಅಂತರ ಬೆಳೆ/ ಸುಧಾರಿತ ತಳಿಗಳ/ ಕೂರಿಗೆ ಬಿತ್ತನೆ /ಊರು ಬಿತ್ತನೆ (Dibbling) ಮತ್ತು ತೊಗರಿ ಬೆಳೆಯಲ್ಲಿ ನಾಟಿ ಪದ್ಧತಿ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸುವುದು.
- ದ್ವಿದಳ ಧಾನ್ಯ ಆಧಾರಿತ ಬೆಳೆ ಪದ್ಧತಿಗಳ( ದ್ವಿದಳ ಧಾನ್ಯ ಬೆಳೆ ಮುಖ್ಯ ಬೆಳೆಯಾಗಿ) ಬಗ್ಗೆ ಮತ್ತು ದ್ವಿದಳಧಾನ್ಯ ಬೆಳೆಗಳನ್ನು ಅಂತರ ಬೆಳೆಯಾಗಿ ಎಣ್ಣೆಕಾಳು ಬೆಳೆಗಳಾದ ಸೋಯಾಬೀನ್ ಮತ್ತು ನೆಲಗಡಲೆ ಬೆಳೆಗಳಲ್ಲಿ ಹಾಗೂ ಒರಟು ಧಾನ್ಯಗಳಲ್ಲಿ ಬೆಳೆಯುವ ಬಗ್ಗೆ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸುವುದು.
- ಸುಧಾರಿತ ತಾಂತ್ರಿಕತೆಗಳ ಬಗ್ಗೆ ಸ್ಥಳೀಯ ಸಂಶೋಧನಾ ಕೇಂದ್ರ/ ಕೃಷಿ ವಿಜ್ಞಾನ ಕೇಂದ್ರಗಳ ವಿಜ್ಞಾನಿಗಳೊಂದಿಗೆ ಸಮಾಲೋಚಿಸಿ ಅಂತಹ ತಾಂತ್ರಿಕತೆಗಳ ಕುರಿತು ಪ್ರಾತ್ಯಕ್ಷಿಕೆಗಳನ್ನು ಆಯೋಜಿಸುವುದು.
- ಪ್ರಾತ್ಯಕ್ಷಿಕೆಯ ವಿವರಣಾ ಫಲಕ (Display board) ದಲ್ಲಿ ರೈತರ ಸಂಖ್ಯೆ, ಹಳ್ಳಿಯ ಹೆಸರು, ತಳಿ ಮತ್ತು ಪ್ರಾತ್ಯಕ್ಷಿಕೆಯ ವಿವರ, ಬಳಸಲಾದ ಪೋಷಕಾಂಶಗಳು, ಬಿತ್ತನೆ/ನಾಟಿ ದಿನಾಂಕ, ಬಿತ್ತನೆ ಬೀಜ ಪ್ರಮಾಣ, ಬೆಳೆಯ ಅಂತರ, ಬಳಸಲಾದ ಪರಿಕರಗಳು ಇತ್ಯಾದಿಗಳ ಬಗ್ಗೆ ಮಾಹಿತಿ ನಮೂದಿಸುವುದು.
- ಜಿಲ್ಲೆಯ ಪ್ರಾತ್ಯಕ್ಷಿಕೆಯ ಸಮಗ್ರ ವರದಿಯನ್ನು ನಿಯತಕಾಲಿಕವಾಗಿ ನಿಗದಿತ ನಮೂನೆಯಲ್ಲಿ ಕೇಂದ್ರ ಕಛೇರಿಗೆ ಕಳುಹಿಸುವುದು.

- ಬೆಳೆಯು ಕಾಳು ತುಂಬುವ ಹಂತದಲ್ಲಿರುವಾಗ (Grain filling stage) ಕ್ಷೇತ್ರೋತ್ಸವವನ್ನು ಆಚರಿಸುವುದು

**ಪ್ರಾತ್ಯಕ್ಷಿಕೆಗಳಿಗೆ ಮಾಡಬಹುದಾದ ವೆಚ್ಚ ಮತ್ತು ಪ್ರೇರಕಗಳ ಬಗ್ಗೆ ವಿವರ:**

| ಕಾರ್ಯಕ್ರಮ | ಮೊತ್ತ(ರೂ) |
|---|---|
| **<u>ಗುಚ್ಛ ಪ್ರಾತ್ಯಕ್ಷಿಕೆಗಳು: (100 ಹೆಕ್ಟೇರ್ ಪ್ರದೇಶದಲ್ಲಿ ಗುಚ್ಛ ಪ್ರಾತ್ಯಕ್ಷಿಕೆ)</u>**<br>ಅಕ್ಕಿ ಬೆಳೆಯಲ್ಲಿ ನೇರ ಬಿತ್ತನೆ/ ಸಾಲು ನಾಟಿ/ SRI (ಜಿಲ್ಲೆಯ ಪ್ರತಿಶತ 1.5 ರಷ್ಟು ಅಕ್ಕಿ ಬೆಳೆ ಪ್ರದೇಶ) ಪ್ರಾತ್ಯಕ್ಷಿಕೆ, ಸಂಕರಣ ಅಕ್ಕಿ ಪ್ರಾತ್ಯಕ್ಷಿಕೆಗಳನ್ನು (ಜಿಲ್ಲೆಯ ಪ್ರತಿಶತ 0.5 ರಷ್ಟು ಅಕ್ಕಿ ಬೆಳೆ ಪ್ರದೇಶ) ಮತ್ತು ಬದು ಬೆಳೆ (ತೊಗರಿ) ಗುಚ್ಛ ಪ್ರಾತ್ಯಕ್ಷಿಕೆಗಳನ್ನು ಹಮ್ಮಿಕೊಳ್ಳುವುದು. | ರೂ. 7500/ಹೆ |
| ***<u>ಬೆಳೆ ಪದ್ಧತಿ ಆಧಾರಿತ ಪ್ರಾತ್ಯಕ್ಷಿಕೆಗಳು (Cropping System based)</u>***<br>• ಮಳೆಯಾಶ್ರಿತ ಪ್ರದೇಶದಲ್ಲಿ ನೇರ ಭತ್ತ ಬಿತ್ತನೆ ನಂತರ ಕಡಲೆ ಬೆಳೆಯನ್ನು ಅನುಕ್ರಮ(sequence) ಪದ್ಧತಿಯಲ್ಲಿ ಬೆಳೆಯುವುದು<br>• ನೀರಾವರಿ ಪ್ರದೇಶದಲ್ಲಿ ಭತ್ತ ನಂತರ ಅಲಸಂದೆ/ ಕಡಲೆ/ ಚನ್ನಂಗಿ/ ಹೆಸರು/ ಉದ್ದು ಬೆಳೆಗಳನ್ನು ಅನುಕ್ರಮ ಪದ್ಧತಿಯಲ್ಲಿ ಬೆಳೆಯುವುದು | ರೂ.12500/ಹೆ |

| | |
|---|---|
| <u>**ಗುಚ್ಛ ಪ್ರಾತ್ಯಕ್ಷಿಕೆಗಳು:**</u><br>ದ್ವಿದಳಧಾನ್ಯಗಳಲ್ಲಿ ಸುಧಾರಿತ ತಾಂತ್ರಿಕತೆಗಳಾದ ಅಂತರ ಬೆಳೆ/ ಸುಧಾರಿತ ತಳಿಗಳ/ ಬಿತ್ತನೆ ಬೀಜ ಕೂರಿಗೆ/ ಊರುಬಿತ್ತನೆ (Dibbling) ಮತ್ತು ತೊಗರಿಯಲ್ಲಿ ನಾಟಿ ಪದ್ಧತಿ ಇತ್ಯಾದಿಗಳ ಬಗ್ಗೆ ಗುಚ್ಛ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸುವುದು. | ರೂ. 7500/ಹೆ |
| <u>***ದ್ವಿದಳಧಾನ್ಯ ಆಧಾರಿತ ಬೆಳೆ ಪದ್ಧತಿ ಪ್ರಾತ್ಯಕ್ಷಿಕೆಗಳು :***</u><br>ದ್ವಿದಳಧಾನ್ಯ ಬೆಳೆಗಳನ್ನು ಅಂತರ ಬೆಳೆಯಾಗಿ ಎಣ್ಣೆಕಾಳು ಬೆಳೆಗಳಾದ ಸೋಯಾಬೀನ್ ಮತ್ತು ನೆಲಗಡಲೆ ಬೆಳೆಗಳಲ್ಲಿ ಹಾಗೂ ಒರಟು ಧಾನ್ಯಗಳಲ್ಲಿ ಬೆಳೆಯುವುದು. | ರೂ.12500/ಹೆ |

**ಸೂಚನೆ :**

**1.** ಪ್ರಾತ್ಯಕ್ಷಿಕೆಗಳನ್ನು ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಆಯಾ ಪ್ರಾತ್ಯಕ್ಷಿಕೆಗಳಡಿ ನಮೂದಿಸಿರುವ ಚಟುವಟಿಕೆಗಳಲ್ಲಿ ಅನುದಾನ ಉಳಿಕೆಯಾದಲ್ಲಿ ಸದರಿ ಅನುದಾನವನ್ನು ಅದೇ ಪ್ರಾತ್ಯಕ್ಷಿಕೆಯಡಿ ಸಾವಯವ ಗೊಬ್ಬರಗಳ ಬಳಕೆಗೆ ವಿನಿಯೋಗಿಸಬಹುದಾಗಿದೆ.

**2.** NFSM ಪ್ರಾತ್ಯಕ್ಷಿಕೆ ವಿವರಗಳು (GPS co-ordinate ಸಹಿತ) ಹಾಗೂ ದಾಖಲಾತಿಗಳನ್ನೊಳಗೊಂಡ (ಛಾಯಾಚಿತ್ರಗಳು, ಕರಪತ್ರಗಳು ಇತ್ಯಾದಿ) ಪ್ರತ್ಯೇಕ ವಹಿಯನ್ನು –ಆಯಾ ರೈತ ಸಂಪರ್ಕ ಕೇಂದ್ರಗಳಲ್ಲಿ ನಿರ್ವಹಿಸುವುದು. ಜಿಲ್ಲಾ ಮಟ್ಟದ ಸಲಹೆಗಾರರು NFSM ಯೋಜನೆಯಡಿ ಜಿಲ್ಲೆಯಲ್ಲಿ ಕೈಗೊಳ್ಳಲಾಗುವ ಎಲ್ಲಾ ಪ್ರಾತ್ಯಕ್ಷಿಕೆಗಳ ವಿವರಗಳನ್ನು ಕ್ರೋಢೀಕರಿಸಿ ಜಿಲ್ಲಾ ಮಟ್ಟದಲ್ಲಿ ಮಾಹಿತಿಯು ಸಕಾಲದಲ್ಲಿ ಲಭ್ಯವಿರುವಂತೆ ಕ್ರಮ ವಹಿಸುವುದು.

## ಪ್ರಾತ್ಯಕ್ಷಿಕೆ ವರದಿ ನಮೂನೆ

| | |
|---|---|
| **2015–16ನೇ ಸಾಲಿನ ಎನ್.ಎಫ್.ಎಸ್.ಎಂ–ಅಕ್ಕಿ, ದ್ವಿದಳ ಧಾನ್ಯ ಕಾರ್ಯಕ್ರಮ – ಪಾತ್ಯಕ್ಷಿಕೆಗಳ ಬಗ್ಗೆ ಪ್ರಾಥಮಿಕ ವರದಿ** | |
| **ಜಿಲ್ಲೆ:** | |
| **ಕಾರ್ಯಕ್ರಮ/ಘಟಕ** | **ವಿವರಗಳು** |
| ಪ್ರಾತ್ಯಕ್ಷಿಕೆ ಕೈಗೊಂಡ ಗ್ರಾಮಗಳ ವಿಳಾಸ (GPS co-ordinate ಸಹಿತ) | |
| ಪ್ರಾತ್ಯಕ್ಷಿಕೆಗಳ ಸಂಖ್ಯೆ | |
| ಪ್ರಾತ್ಯಕ್ಷಿಕೆಗಳ ಕ್ಷೇತ್ರ (ಹೆಕ್ಟೇರ್) | |
| ಫಲಾನುಭವಿಗಳು | |
| (ಅ) ಪರಿಶಿಷ್ಟ ಜಾತಿ | |
| (ಆ) ಪರಿಶಿಷ್ಟ ಪಂಗಡ | |
| (ಇ) ಮಹಿಳಾ ಫಲಾನುಭವಿಗಳು | |
| ಒಟ್ಟು ಫಲಾನುಭವಿಗಳು | |
| ಬಿತ್ತನೆ ದಿನಾಂಕ/ದಿನಾಂಕಗಳು | |
| ಪ್ರಾತ್ಯಕ್ಷಿಕೆ ಪ್ರದೇಶದಲ್ಲಿ ಬಳಸಲಾದ ಸುಧಾರಿತ ತಳಿಗಳು | |
| ಪ್ರಾತ್ಯಕ್ಷಿಕೆಯಲ್ಲಿ ಬಳಸಲಾದ ಪರಿಕರಗಳು | |
| ಅಳವಡಿಸಲಾದ ಸುಧಾರಿತ ಬೇಸಾಯ ಕ್ರಮಗಳು ತಾಂತ್ರಿಕತೆಗಳು | |
| ಬೇಸಾಯಕ್ಕಾಗಿ ಉಪಯೋಗಿಸಿಕೊಂಡ ಸುಧಾರಿತ ಯಂತ್ರೋಪಕರಣಗಳು | |
| ಇತರೆ ವಿಶೇಷತೆ ಏನಾದರೂ ಇದ್ದಲ್ಲಿ | |

**ಬಿತ್ತನೆ ಬೀಜ:**

- ದೊಡ್ಡ ಪ್ರಮಾಣದ ಪ್ರಾತ್ಯಕ್ಷಿಕೆಗಳನ್ನು ಗುಚ್ಛ ಪ್ರಾತ್ಯಕ್ಷಿಕೆಗಳಾಗಿ , ಪ್ರತಿ ಜಿಲ್ಲೆಯಲ್ಲಿ ಏರ್ಪಡಿಸುವಂತೆ ಯೋಜಿಸಲಾಗಿದ್ದು, ಪ್ರಾತ್ಯಕ್ಷಿಕೆಗಾಗಿ ಕೃಷಿ ಪರಿಕರಗಳೊಂದಿಗೆ ಸುಧಾರಿತ ತಳಿಗಳ ಬಿತ್ತನೆ ಬೀಜವನ್ನು ರೈತರಿಗೆ ಒದಗಿಸಲು ಅವಕಾಶ ಕಲ್ಪಿಸಲಾಗಿದೆ.
- ಹತ್ತು ವರ್ಷಗಳಿಂದೀಚೆಗೆ ಬಿಡುಗಡೆಯಾದ ತಳಿಗಳ ಬಿತ್ತನೆ ಬೀಜಗಳನ್ನು ಮಾತ್ರ ವಿತರಿಸಲು ಅವಕಾಶವಿರುತ್ತದೆ
  - **ಭತ್ತ :** ಹೈಬ್ರಿಡ್ ಭತ್ತದ ಬಿತ್ತನೆ ಬೀಜಕ್ಕೆ ಶೇ.50 ರಷ್ಟು ರಿಯಾಯಿತಿ ದರದಲ್ಲಿ ಪ್ರತಿ ಕ್ವಿಂಟಾಲ್ ಗೆ ರೂ.5000/– ಕ್ಕೆ ಮೀರದಂತೆ ವಿತರಿಸುವುದು.
    **10 ವರ್ಷಗಳಿಂದೀಚೆಗೆ** ಬಿಡುಗಡೆಯಾದ ಭತ್ತದ ತಳಿಗಳ ಬಿತ್ತನೆ ಬೀಜಗಳಿಗೆ ಶೇ.50 ರಷ್ಟು ರಿಯಾಯಿತಿ ದರದಲ್ಲಿ ಪ್ರತಿ ಕ್ವಿಂಟಾಲಿಗೆ ರೂ. 1000/– ಮೀರದಂತೆ ವಿತರಿಸುವುದು.
  - **ದ್ವಿದಳಧಾನ್ಯಗಳು:** ಶೇ.50 ರಷ್ಟು ರಿಯಾಯಿತಿ ದರದಲ್ಲಿ ಪ್ರತಿ ಕ್ವಿಂಟಾಲ್ ಗೆ ರೂ.2500/– ಕ್ಕೆ ಮೀರದಂತೆ ವಿತರಿಸುವುದು. **ದ್ವಿದಳಧಾನ್ಯಗಳಲ್ಲಿ ಮಾತ್ರ 15 ವರ್ಷಗಳಿಂದೀಚೆಗೆ** ಬಿಡುಗಡೆಯಾದ ತಳಿಗಳ ಬಿತ್ತನೆ ಬೀಜಗಳನ್ನು ಬೀಜ ವಿತರಣೆ ಮತ್ತು ಪ್ರಾತ್ಯಕ್ಷಿಕೆ ಘಟಕಗಳಡಿ ವಿತರಿಸಲು ಅವಕಾಶವಿರುತ್ತದೆ.

ಎನ್.ಎಫ್.ಎಸ್.ಎಮ್– ಅಕ್ಕಿ ಮತ್ತು ದ್ವಿದಳಧಾನ್ಯ ಯೋಜನೆಗಳಡಿ ಘಟಕಗಳ ಅನುಷ್ಠಾನಕ್ಕಾಗಿ, ವಿವಿಧ ಕೃಷಿ ಪರಿಕರಗಳಿಗೆ ನೀಡಬಹುದಾದ ಶೇ. 50ರ ರಿಯಾಯಿತಿ ದರ ಹಾಗೂ ಗರಿಷ್ಠ ಸಹಾಯಧನದ ವಿವರಗಳನ್ನು **ಅನುಬಂಧ–1 ಮತ್ತು 2** ರಲ್ಲಿ ನೀಡಲಾಗಿದೆ.

**ರೈತರಿಗೆ ತರಬೇತಿ:**

- 'ಬೆಳೆಪದ್ಧತಿ' (Cropping System) ತತ್ವದಡಿ ಆಯೋಜಿಸುವುದು
- 30 ರೈತರ ಗುಂಪುಗಳನ್ನೊಳಗೊಂಡ ಪ್ರತಿ Sessionಗೆ ರೂ. 3500/– ನಂತೆ ಒಟ್ಟು ನಾಲ್ಕು 'Session'ಗಳನ್ನು ಏರ್ಪಡಿಸುವುದು
- ಪ್ರತಿ ತರಬೇತಿಗೆ ಒಟ್ಟು ರೂ. 14,000/– ನ್ನು ಈ ಕೆಳಗಿನಂತೆ ವೆಚ್ಚ ಮಾಡಬಹುದಾಗಿರುತ್ತದೆ.
- ಈ ನಾಲ್ಕು Sessionಗಳಲ್ಲಿ, ಮೊದಲನೆಯದನ್ನು ಪೂರ್ವ ಮುಂಗಾರಿನಲ್ಲಿ, ಎರಡನೆಯದನ್ನು ಮುಂಗಾರು ಬೆಳೆಯ ಅವಧಿಯಲ್ಲಿ, ಮೂರನೆಯ Session ಅನ್ನು ಹಿಂಗಾರಿನಲ್ಲಿ ಮತ್ತು ನಾಲ್ಕನೆಯದನ್ನು ಹಿಂಗಾರು ಬೆಳೆಯ ಕಟಾವಿನ ಹಂತದಲ್ಲಿ ಏರ್ಪಡಿಸುವುದು.

| ಘಟಕ | ದರ | ಒಟ್ಟು ಮೊತ್ತ(ರೂ) |
|---|---|---|
| ಒಬ್ಬ ತರಬೇತಿದಾರನ ಗೌರವಧನ | ಒಟ್ಟು ನಾಲ್ಕು 'Session'ಗಳಿಗೆ ರೂ 500/ Session ರಂತೆ | 2000.00 |
| ತರಬೇತಿ ಸಾಮಗ್ರಿಗಳು ಹಾಗೂ ಸ್ಟೇಷನರಿ | ಒಟ್ಟು ನಾಲ್ಕು 'Session'ಗಳಿಗೆ ರೂ 500/ Session ರಂತೆ | 2000.00 |
| ತರಬೇತುದಾರರಿಗೆ, ತರಬೇತಿ ಪಡೆಯುವವರಿಗೆ ಮತ್ತು ಪೂರಕ ಸಿಬ್ಬಂದಿಗಳಿಗೆ ಟೀ/ಲಘು ಉಪಹಾರ ಒದಗಿಸುವುದು | ಒಬ್ಬ ರೈತನಿಗೆ ರೂ 50 ರಂತೆ ಪ್ರತಿ 'Session ಗೆ 35 (ರೈತರು+ಸಿಬ್ಬಂದಿ) 50X35X4 | 7000.00 |
| ಸಾದಿಲ್ವಾರು ವೆಚ್ಚ, ಇಂಧನ ವೆಚ್ಚ ಮತ್ತು ರೈತರ ಪ್ರಯಾಣ ವೆಚ್ಚ | ಒಟ್ಟು ನಾಲ್ಕು 'Session'ಗಳಿಗೆ ರೂ 750/ Session ರಂತೆ | 3000.00 |
| **ಒಟ್ಟು** | | **14000.00** |

**ಇತರೆ ಪ್ರೇರಕಗಳು:**

ಭತ್ತದ ಮತ್ತು ದ್ವಿದಳ ಧಾನ್ಯ ಬೆಳೆಗಳಲ್ಲಿ NGOಗಳಿಂದ ಪ್ರಾತ್ಯಕ್ಷಿಕೆ ಕಾರ್ಯಕ್ರಮವನ್ನು ಅಳವಡಿಸಿಕೊಳ್ಳಲಾಗಿದೆ.

**ಸ್ಥಳೀಯ ಪ್ರೇರಕಗಳು:**

ಸ್ಥಳೀಯ ಪ್ರೇರಕಗಳು: ಅಭಿಯಾನದ ಸಾಮಾನ್ಯ ಚಟುವಟಿಕೆಗಳಲ್ಲಿ ಸೇರ್ಪಡೆಗೊಳಿಸದಿರುವ, ಆದರೆ ಭತ್ತ, ದ್ವಿದಳ ಧಾನ್ಯ ಹಾಗೂ ಒರಟು ಧಾನ್ಯಗಳಲ್ಲಿ ಉತ್ಪಾದನೆ ಹೆಚ್ಚಿಸುವ ನಿಟ್ಟಿನಲ್ಲಿ ಸ್ಥಳೀಯವಾಗಿ ಪ್ರಾಮುಖ್ಯತೆ ಪಡೆದಿರುವ ಅಂಶ/ಚಟುವಟಿಕೆಗಳನ್ನು ಸೇರ್ಪಡೆಗೊಳಿಸಿ ಅನುದಾನ ಒದಗಿಸಿಕೊಳ್ಳಲು ರಾಜ್ಯಗಳಿಗೆ ಅವಕಾಶವಿರುತ್ತದೆ.

ನೀರಿನ ಸಂಪನ್ಮೂಲಗಳ ಸಂರಕ್ಷಣೆ, ಅತ್ಯವಶ್ಯ ಪರಿಕರಗಳ ಸಂರಕ್ಷಣೆಗಾಗಿ ಗೋದಾಮುಗಳ ಅಭಿವೃದ್ಧಿ, ಕೊಯ್ಲೋತ್ತರ ಸಂಸ್ಕರಣಾ ಘಟಕಗಳಂತಹ ಉಪಕರಣಗಳ ವಿತರಣೆಗೆ ಅವಕಾಶವಿರುತ್ತದೆ.

ಭತ್ತದ ಬೆಳೆಯಲ್ಲಿ ಹಸಿರೆಲೆ ಗೊಬ್ಬರ ಬೀಜಗಳ ವಿತರಣೆ, ಕೇಜ್ ವೀಲ್, ಪವರ್ ರೀಪರ್ ಮತ್ತು ಕೊಯ್ಲೋತ್ತರ ತಾಂತ್ರಿಕತೆ ಘಟಕದಡಿ ಮಿನಿ ರೈಸ್ ಮಿಲ್ ಹಾಗೂ ಫ್ಲೋರ್ ಮಿಲ್/ಪಲ್ವರೈಸರ್‌ಗಳ ವಿತರಣೆ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳಲಾಗಿದೆ.

ದ್ವಿದಳ ಧಾನ್ಯ ಬೆಳೆಗಳಲ್ಲಿ ಸೋಲಾರ್ ಪಂಪ್ ಸೆಟ್‌ಗಳ ವಿತರಣೆ, ರಾಜ್ಯಗಳಿಗೆ ರೈತರ ಪ್ರವಾಸ, ತಾಲ್ಲೂಕು ಮಟ್ಟದ ತರಬೇತಿಗಳು ಮಾಹಿತಿ ಪ್ರಕಟಣೆ ಮತ್ತು ಕೊಯ್ಲೋತ್ತರ ತಾಂತ್ರಿಕತೆ ಘಟಕದಡಿ ದಾಲ್ ಪ್ರೊಸೆಸರ್ ವಿತರಣೆ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳಲಾಗಿದೆ.

**ಇತರೆ ವೆಚ್ಚಗಳು:**

ರಾಷ್ಟ್ರ, ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಎನ್.ಎಫ್.ಎಸ್.ಎಂ ಯೋಜನೆಯಡಿ ಸಿಬ್ಬಂದಿ ವರ್ಗದವರ ಕೆಲಸವು ಸುಸೂತ್ರವಾಗಿ ನಡೆಯಲು ಅನುಕೂಲವಾಗುವಂತೆ ಲೇಖನ ಸಾಮಗ್ರಿ ಮತ್ತು ಇತರೆ ವೆಚ್ಚಗಳನ್ನು ಭರಿಸಲು ಅನುದಾನವನ್ನು ಒದಗಿಸಿಕೊಳ್ಳಲಾಗಿದೆ.

ಜಿಲ್ಲಾ ಮಟ್ಟದಲ್ಲಿ ಬಾಡಿಗೆ ಆಧಾರದ ಮೇಲೆ ವಾಹನ ಸೌಲಭ್ಯವನ್ನು ಪಡೆಯಲು ವಾರ್ಷಿಕ ರೂ. 1.20 ಲಕ್ಷಗಳನ್ನು ಹಾಗೂ ಲೇಖನ ಸಾಮಗ್ರಿ ಖರೀದಿಗೆ ವಾರ್ಷಿಕ ರೂ. 0.50 ಲಕ್ಷಗಳನ್ನು ನೀಡಲಾಗುವುದು.

ಹೊಸದಾಗಿ ರಚನೆಯಾಗಿರುವ ಜಿಲ್ಲೆಗಳು ಅಥವಾ 11 ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಗಣಕ ಯಂತ್ರವನ್ನು ಒಮ್ಮೆಯೂ ಖರೀದಿಸದೇ ಇರುವ ಜಿಲ್ಲೆಗಳು ಒಮ್ಮೆ ಮಾತ್ರ ಗಣಕ ಯಂತ್ರ ಮತ್ತು accessories ಅನ್ನು ಜಿಲ್ಲೆಯೊಂದಕ್ಕೆ ರೂ. 1.0 ಲಕ್ಷಗಳ ಅನುದಾನವು ಲಭ್ಯವಿರುತ್ತದೆ.

ರಾಜ್ಯ ಮಟ್ಟದಲ್ಲಿ ಅಭಿಯಾನದ ಚಟುವಟಿಕೆಗಳಿಗಾಗಿ ಬಾಡಿಗೆ ಆಧಾರದ ಮೇಲೆ ವಾಹನ ಸೌಲಭ್ಯವನ್ನು ಪಡೆಯಲು ವಾರ್ಷಿಕ ರೂ. 1.20 ಲಕ್ಷಗಳ ಅನುದಾನವು ಅಭ್ಯವಿರುತ್ತದೆ. ಪ್ರತಿ ಹದಿನೈದು ಜಿಲ್ಲೆಗಳಿಗೆ ರೂ. 1.0 ಲಕ್ಷಗಳ ಅನುದಾನವನ್ನು ಲೇಖನ ಸಾಮಗ್ರಿ ಮತ್ತು ಇತರೆ ವೆಚ್ಚಗಳನ್ನು ಭರಿಸಲು ವಿನಿಯೋಗಿಸಬಹುದಾಗಿದೆ.

**ಅಭಿಯಾನದಡಿ ಕಾರ್ಯ ನಿರ್ವಹಿಸುವ ಯೋಜನಾ ಉಸ್ತುವಾರಿ ತಂಡದ ರಾಜ್ಯ ಮಟ್ಟದ ಸಲಹೆಗಾರರು, ತಾಂತ್ರಿಕ ಸಹಾಯಕರು, ಜಿಲ್ಲಾ ಮಟ್ಟದ ಸಲಹೆಗಾರರು ಮತ್ತು ತಾಂತ್ರಿಕ ಸಹಾಯಕರುಗಳ ವಿದ್ಯಾರ್ಹತೆ, ಅನುಭವ ಮತ್ತು ನೀಡಲಾಗುವ ಗೌರವಧನದ ವಿವರಗಳು:**

| ಹುದ್ದೆ | ವಿದ್ಯಾರ್ಹತೆ ಮತ್ತು ಅನುಭವ | ಮಾಸಿಕ ವಂತಿಗೆ (ರೂ.ಗಳಲ್ಲಿ) | ಮಾಸಿಕ ಪ್ರಯಾಣ ವೆಚ್ಚ (ರೂ.ಗಳಲ್ಲಿ) | ದಿನ ಭತ್ಯೆ (ದಿನವೊಂದಕ್ಕೆ ರೂ. ಗಳಲ್ಲಿ) |
|---|---|---|---|---|
| ಅ. ರಾಜ್ಯ ಮಟ್ಟ | 1. ಬೇಸಾಯಶಾಸ್ತ್ರ/ ಕೃಷಿ ವಿಸ್ತರಣೆ/ ಮಣ್ಣು ವಿಜ್ಞಾನ / ಸಸ್ಯ ತಳಿಶಾಸ್ತ್ರ/ ಸಸ್ಯ ಸಂರಕ್ಷಣೆ/ ಬೆಳೆ ಅಭಿವೃದ್ಧಿ ವಿಷಯಗಳಲ್ಲಿ ಡಾಕ್ಟರೇಟ್‌ನೊಂದಿಗೆ ಕನಿಷ್ಠ ಹತ್ತು(10) ವರ್ಷಗಳ ಕ್ಷೇತ್ರ ಅನುಭವ(ಪರಿಣಿತಿ) ಅಥವಾ ಮೇಲಿನ ವಿಷಯಗಳಲ್ಲಿ ಸ್ನಾತಕೋತ್ತರ ಪದವಿಯೊಂದಿಗೆ ಬೆಳೆ ಉತ್ಪಾದನೆಯಲ್ಲಿ ಕನಿಷ್ಠ ಇಪ್ಪತ್ತು (20) ವರ್ಷಗಳ ಅನುಭವ(ಪರಿಣಿತಿ) ಇರಬೇಕು<br>2. ಡಾಟಾ ಪರಿಶೀಲಿಸುವಂತಹ ಮತ್ತು ಪ್ರಾಯೋಜನೆಗಳ ತಯಾರಿಕೆ ಸಾಮರ್ಥ್ಯ, ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ನಿಯತಕಾಲಿಕೆಗಳಲ್ಲಿ ಪ್ರಕಟವಾಗುವಂತಹ ರೀತಿಯಲ್ಲಿ ವರದಿಗಳು/ ಸಮ್ಮೇಳನಾ ವರದಿಗಳು/ ಲೇಖನಗಳನ್ನು ಸಿದ್ಧಪಡಿಸುವ ಸಾಮರ್ಥ್ಯ ಹೊಂದಿರಬೇಕು<br>3. ತಂಡದ ಮುಖ್ಯಸ್ಥರಾಗಿ ಧ್ಯೇಯೋದ್ದೇಶದೊಂದಿಗೆ ಹಾಗೂ ತಂಡವನ್ನು ಹುರಿದುಂಬಿಸಿ ಕಾರ್ಯ ನಿರ್ವಹಿಸುವ ಸಾಮರ್ಥ್ಯವಿರಬೇಕು. | 50,000 | 2,000 | 200 (ತಿಂಗಳಿನಲ್ಲಿ 10 ದಿನಗಳು ಅಥವಾ ರಾಜ್ಯದಲ್ಲಿ ಜಾರಿಯಲ್ಲಿರುವ ನಿಯನಾವಳಿಗಳು) |
| ತಾಂತ್ರಿಕ ಸಹಾಯಕರು | 1. ಕೃಷಿಯಲ್ಲಿ ಸ್ನಾತಕೋತ್ತರ ಪದವಿಯೊಂದಿಗೆ ಕ್ಷೇತ್ರ ಬೆಳೆಗಳ ನಿರ್ವಹಣೆಯಲ್ಲಿ ಪರಿಣಿತಿಯನ್ನು ಹೊಂದಿರಬೇಕು. ಗಣಕಯಂತ್ರದ ಬಗ್ಗೆ ಜ್ಞಾನ ಅಗತ್ಯ<br>2.ಸಂಶೋಧನೆ ಮತ್ತು ವಿಸ್ತರಣೆಯಲ್ಲಿ ಅನುಭವವಿರುವ ಅಭ್ಯರ್ಥಿಗಳಿಗೆ ಆದ್ಯತೆ | 25,000 | 1,500 | 150 (ತಿಂಗಳಿನಲ್ಲಿ 10 ದಿನಗಳು ಅಥವಾ ರಾಜ್ಯದಲ್ಲಿ ಜಾರಿಯಲ್ಲಿರುವ ನಿಯನಾವಳಿಗಳು) |

| ಹುದ್ದೆ | ವಿದ್ಯಾರ್ಹತೆ ಮತ್ತು ಅನುಭವ | ಮಾಸಿಕ ವಂತಿಗೆ (ರೂ.ಗಳಲ್ಲಿ) | ಮಾಸಿಕ ಪ್ರಯಾಣ ವೆಚ್ಚ (ರೂ.ಗಳಲ್ಲಿ) | ದಿನ ಭತ್ಯೆ (ದಿನವೊಂದಕ್ಕೆ ರೂ. ಗಳಲ್ಲಿ) |
|---|---|---|---|---|
| ಅ. ಜಿಲ್ಲಾ ಮಟ್ಟ ಸಲಹೆಗಾರರ ೧ | 1. ಬೇಸಾಯಶಾಸ್ತ್ರ/ ಕೃಷಿ ವಿಸ್ತರಣೆ/ ಮಣ್ಣು ವಿಜ್ಞಾನ / ಸಸ್ಯ ತಳಿಶಾಸ್ತ್ರ/ ಸಸ್ಯ ಸಂರಕ್ಷಣೆ/ ಬೆಳೆ ಅಭಿವೃದ್ಧಿ ವಿಷಯಗಳಲ್ಲಿ ಸ್ನಾತಕೋತ್ತರ ಪದವಿಯೊಂದಿಗೆ ಕನಿಷ್ಠ ಹತ್ತು (10) ವರ್ಷಗಳ ಕ್ಷೇತ್ರ ಅನುಭವ(ಪರಿಣಿತಿ) ಇರಬೇಕು<br>2. ತಂಡದ ಮುಖ್ಯಸ್ಥರಾಗಿ ಧ್ಯೇಯೋದ್ದೇಶದೊಂದಿಗೆ ಹಾಗೂ ತಂಡವನ್ನು ಹುರಿದುಂಬಿಸಿ ಕಾರ್ಯ ನಿರ್ವಹಿಸುವ ಸಾಮರ್ಥ್ಯವಿರಬೇಕು. | 30,000 | 1,000 | 150 (ತಿಂಗಳಿನಲ್ಲಿ 10 ದಿನಗಳು ಅಥವಾ ರಾಜ್ಯದಲ್ಲಿ ಜಾರಿಯಲ್ಲಿರುವ ನಿಯನಾವಳಿಗಳು) |
| ತಾಂತ್ರಿಕ ಸಹಾಯಕರು | 1. ಕೃಷಿಯಲ್ಲಿ ಪದವಿಯೊಂದಿಗೆ ಕ್ಷೇತ್ರ ಬೆಳೆಗಳ ನಿರ್ವಹಣೆಯಲ್ಲಿ ಪರಿಣಿತಿಯನ್ನು ಹೊಂದಿರಬೇಕು. ಗಣಕಯಂತ್ರದ ಬಗ್ಗೆ ಜ್ಞಾನ ಅಗತ್ಯ. ಕೃಷಿ ಪದವೀಧರರು ಲಭ್ಯವಿಲ್ಲದಿದ್ದ ಸಂದರ್ಭದಲ್ಲಿ ಜೀವ ಶಾಸ್ತ್ರದಲ್ಲಿ ಪದವಿ ಪಡೆದಿರುವ ಅಭ್ಯರ್ಥಿಯನ್ನು ಪರಿಗಣಿಸಬಹುದಾಗಿದೆ.<br>2. ಸಂಶೋಧನೆ ಮತ್ತು ವಿಸ್ತರಣೆಯಲ್ಲಿ ಅನುಭವವಿರುವ ಅಭ್ಯರ್ಥಿಗಳಿಗೆ ಆದ್ಯತೆ | 20,000 | 800 | 100 (ತಿಂಗಳಿನಲ್ಲಿ 10 ದಿನಗಳು ಅಥವಾ ರಾಜ್ಯದಲ್ಲಿ ಜಾರಿಯಲ್ಲಿರುವ ನಿಯನಾವಳಿಗಳು) |

## ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ–ಒರಟು ಧಾನ್ಯಗಳು

NFSM ಒರಟು ಧಾನ್ಯಗಳ ಯೋಜನೆಯಡಿ ಈ ಕೆಳಕಂಡ ಘಟಕಗಳನ್ನು ಅನುಷ್ಠಾನಗೊಳಿಸಲಾಗುವುದು:

1. **NFSM (ಒರಟು ಧಾನ್ಯ) ಯೋಜನೆಯಡಿ ಪ್ರಾತ್ಯಕ್ಷಿಕೆಗಳು:**
   ಮುಸುಕಿನ ಜೋಳ, ರಾಗಿ, ಜೋಳ, ಸಜ್ಜೆ ಮತ್ತು ಇತರೆ ತೃಣ ಧಾನ್ಯಗಳ ಪ್ರಾತ್ಯಕ್ಷಿಕೆಗಳು
2. **ಪ್ರಮಾಣಿತ ಬಿತ್ತನೆ ಬೀಜ ವಿತರಣೆ:** ಪ್ರಮಾಣಿತ ಬಿತ್ತನೆ ಬೀಜ/ಹೈಬ್ರಿಡ್ ಬಿತ್ತನೆ ಬೀಜ ವಿತರಣೆ

**ವೇಗವರ್ಧಕ ಬೆಳೆ ಉತ್ಪಾದನಾ ಕಾರ್ಯಕ್ರಮ ACPP** (Accelerated Crop Production Programme): ದೊಡ್ಡ ಪ್ರಮಾಣದ ಬೆಳೆ ಉತ್ಪಾದನಾ ಮತ್ತು ಸಂರಕ್ಷಣಾ ತಾಂತ್ರಿಕತೆಗಳ ಪ್ರಾತ್ಯಕ್ಷಿಕೆಗಳನ್ನು ಬೆಳೆ ಪದ್ಧತಿ ಆಧಾರದ ಮೇರೆಗೆ ತೆಗೆದುಕೊಳ್ಳುವುದು.

**ಒರಟು ಧಾನ್ಯಗಳ ಪ್ರಾತ್ಯಕ್ಷಿಕೆಗಳು:**

ಒರಟು ಧಾನ್ಯಗಳು (ಮುಸುಕಿನ ಜೋಳ, ಜೋಳ, ಸಜ್ಜೆ, ರಾಗಿ. ನವಣೆ, ಸಾಮೆ ಬೆಳೆಗಳು) ಮತ್ತು ಒರಟು ಧಾನ್ಯಗಳ ಬೆಳೆ ಆಧಾರಿತ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳಬಹುದಾಗಿದೆ. ಒರಟು ಧಾನ್ಯಗಳೊಂದಿಗೆ ಸೂಕ್ತ ದ್ವಿದಳ ಧಾನ್ಯಗಳನ್ನು ಅಂತರ ಬೆಳೆಯಾಗಿ ಪ್ರಾತ್ಯಕ್ಷಿಕೆಯಡಿ ಆಯ್ಕೆ ಮಾಡಿಕೊಳ್ಳಬಹುದಾಗಿರುತ್ತದೆ.

**ಪ್ರಮಾಣಿತ ಬಿತ್ತನೆ ಬೀಜ/ಹೈಬ್ರಿಡ್ ಬಿತ್ತನೆ ಬೀಜ ವಿತರಣೆ:**

(i) ರಾಜ್ಯವು ಅನುಮೋದಿಸಿದ ಬೀಜೋತ್ಪಾದಕ ಸಂಸ್ಥೆಗಳ (NSC, KSSC, ಕೃಷಿ ವಿಶ್ವ ವಿದ್ಯಾನಿಲಯ, ಖಾಸಗಿ ಕಂಪನಿಗಳು) ವತಿಯಿಂದ ಬೀಜ ವಿತರಣೆಗೆ ವ್ಯವಸ್ಥೆ ಮಾಡುವುದು. ಗ್ರಾಮ ಪಂಚಾಯಿತಿಯ ನೆರವಿನೊಂದಿಗೆ ಜಿಲ್ಲಾ ಆಹಾರ ಭದ್ರತಾ ಅಭಿಯಾನ ಅನುಷ್ಠಾನ ಸಮಿತಿಯು (DFSMEC) ಫಲಾನುಭವಿಗಳ ಆಯ್ಕೆಯನ್ನು ಮಾಡುವುದು. ಒಬ್ಬ ರೈತ ಫಲಾನುಭವಿಗೆ ಬೀಜ ಖರೀದಿಸಲು ಆರ್ಥಿಕ ನೆರವು ಗರಿಷ್ಠ 2 ಹೆ.ಗೆ ನೀಡಬಹುದಾಗಿದೆ.

**ಒರಟು ಧಾನ್ಯಗಳ ಪ್ರಮಾಣಿತ ಬಿತ್ತನೆ ಬೀಜ ವಿತರಣೆಗೆ ಆರ್ಥಿಕ ನೆರವು ಕೆಳಕಂಡಂತಿರುತ್ತದೆ.**

**ಸಂಕರಣ ತಳಿಗಳು (ಹೈಬ್ರಿಡ್ಸ್):** ಬಿತ್ತನೆ ಬೀಜದ ಶೇ. 50 ರಷ್ಟು ಅಥವಾ ಪ್ರತಿ ಕೆಜಿಗೆ ರೂ.50/– ಯಾವುದು ಕಡಿಮೆಯೋ ಅದು.

**ಅಧಿಕ ಇಳುವರಿ ತಳಿಗಳು:** 10 ವರ್ಷಗಳಿಂದೀಚೆಗೆ ಬಿಡುಗಡೆಯಾದ ಬಿತ್ತನೆ ಬೀಜದ ಬೆಲೆಯ ಶೇ.50 ಅಥವಾ ಪ್ರತಿ ಕೆಜಿಗೆ ರೂ. 15/– ಯಾವುದು ಕಡಿಮೆಯೋ ಅದು.

ಕೇಂದ್ರ ಸರ್ಕಾರದ ಸ್ವಾಮ್ಯದ ಬೀಜ ಸಂಸ್ಥೆಗಳಾದ NSC/SFCI ಸಂಸ್ಥೆಗಳು ಬೀಜ ಸರಬರಾಜು ಮಾಡಿದಲ್ಲಿ ಸಹಾಯಧನವನ್ನು ನೇರವಾಗಿ ಕೇಂದ್ರ ಸರ್ಕಾರವು ರಾಜ್ಯಕ್ಕೆ ಹಂಚಿಕೆ ಮಾಡಿದ ಅನುದಾನದಿಂದ ಸಂಸ್ಥೆಗಳಿಗೆ ಮರು ಪಾವತಿ ಮಾಡುತ್ತದೆ.

## ಅನುಬಂಧ–1

## ಎನ್.ಎಫ್.ಎಸ್.ಎಂ(ಅಕ್ಕಿ)ಯೋಜನೆಯಡಿ ದೊರೆಯುವ ಸೌಲಭ್ಯಗಳು

| ಕ್ರ. ಸಂ | ಘಟಕ | ಶೇ. 50 ರ ಅನುಮೋದಿತ ಗರಿಷ್ಠ ಸಹಾಯಧನ |
|---|---|---|
| 1 | **100 ಹೆಕ್ಟೇರ್ ಪ್ರದೇಶದ ಗುಚ್ಛ ಪ್ರಾತ್ಯಕ್ಷಿಕೆಗಳು** | |
| | ಅ) ನೇರ ಭತ್ತ ಬಿತ್ತನೆ ಕಾರ್ಯಕ್ರಮ/ ಸಾಲು ನಾಟಿ/ ಶ್ರೀ ಪದ್ಧತಿ (ಜಿಲ್ಲೆಯ ಶೇ.1.5ರಷ್ಟು ಪ್ರದೇಶ) | ಪ್ರತಿ ಹೆಕ್ಟೇರ್ ಗೆ ರೂ.7500/– |
| | ಆ) ಹೈಬ್ರಿಡ್ ಬತ್ತದ ಪ್ರಾತ್ಯಕ್ಷಿಕೆಗಳು | ಪ್ರತಿ ಹೆಕ್ಟೇರ್ ಗೆ ರೂ.7500/– |
| | ಇ) ಭತ್ತದ ಬದುವಿನ ಮೇಲೆ ತೊಗರಿ ಬೆಳೆ | ಪ್ರತಿ ಹೆಕ್ಟೇರ್ ಗೆ ರೂ.7500/– |
| | ಈ) ಬೆಳೆ ಪದ್ಧತಿ ಆಧಾರಿತ ಪ್ರಾತ್ಯಕ್ಷಿಕೆಗಳು | ಪ್ರತಿ ಹೆಕ್ಟೇರ್ ಗೆ ರೂ.12500/– |
| 2 | **ಬಿತ್ತನೆ ಬೀಜ ವಿತರಣೆ** | |
| | ಅ) ಹೈಬ್ರಿಡ್ ಬತ್ತ | ಪ್ರತಿ ಕ್ವಿಂಟಾಲ್ ಗೆ ರೂ.5000/– |
| | ಆ) ಅಧಿಕ ಇಳುವರಿ ತಳಿಗಳು(10 ವರ್ಷಗಳಿಂದೀಚೆಗೆ ಬಿಡುಗಡೆಯಾದ ತಳಿಗಳಿಗೆ ಮಾತ್ರ) | ಪ್ರತಿ ಕ್ವಿಂಟಾಲ್ ಗೆ ರೂ.1000/– |
| 3 | **ಸಸ್ಯ ಮತ್ತು ಮಣ್ಣು ಸಂರಕ್ಷಣೆ ನಿರ್ವಹಣೆ** | |
| | ಅ) ಲಘು ಪೋಷಕಾಂಶಗಳು | ಪ್ರತಿ ಹೆಕ್ಟೇರ್ ಗೆ ರೂ.500/– |
| | ಆ) ಕೃಷಿ ಸುಣ್ಣ | ಪ್ರತಿ ಹೆಕ್ಟೇರ್ ಗೆ ರೂ.1000/– |
| | ಇ) ಸಸ್ಯ ಸಂರಕ್ಷಣಾ ಔಷಧಿಗಳು ಜೈವಿಕ ನಿಯಂತ್ರಣ ಕಾರಕಗಳು | ಪ್ರತಿ ಹೆಕ್ಟೇರ್ ಗೆ ರೂ.500/– |
| | ಈ) ಕಳೆನಾಶಕಗಳು | ಪ್ರತಿ ಹೆಕ್ಟೇರ್ ಗೆ ರೂ.500/– |
| 4 | **ಸಂಪನ್ಮೂಲ ಸಂರಕ್ಷಣಾ ತಾಂತ್ರಿಕತೆಗಳು/ ಸಾಧನಗಳು** | |
| | ಅ) ಕೋನೋವೀಡರ್ | ಪ್ರತಿ ಘಟಕಕ್ಕೆ ರೂ.600/– |
| | ಆ) ಮಾನವ ಚಾಲಿತ ಸ್ಪ್ರೇಯರ್ | ಪ್ರತಿ ಘಟಕಕ್ಕೆ ರೂ.600/– |
| | ಇ) ಪವರ್ ನ್ಯಾಪ್‌ಸ್ಯಾಕ್ ಸ್ಪ್ರೇಯರ್ | ಪ್ರತಿ ಘಟಕಕ್ಕೆ ರೂ.3000/– |
| | ಈ) ಬಿತ್ತನೆ ಬೀಜ– ರಸಗೊಬ್ಬರ ಕೂರಿಗೆ | ಪ್ರತಿ ಘಟಕಕ್ಕೆ ರೂ.15000/– |
| | ಉ) ಮಲ್ಟಿಕ್ರಾಪ್ ಪ್ಲ್ಯಾಂಟರ್ | ಪ್ರತಿ ಘಟಕಕ್ಕೆ ರೂ.15000/– |
| | ಊ) ಪವರ್ ವೀಡರ್ | ಪ್ರತಿ ಘಟಕಕ್ಕೆ ರೂ.15000/– |
| | ಋ) ಜೀರೋ ಟಿಲ್ ಮಲ್ಟಿಕ್ರಾಪ್ ಪ್ಲ್ಯಾಂಟರ್ | ಪ್ರತಿ ಘಟಕಕ್ಕೆ ರೂ.15000/– |
| | ಎ) ಡ್ರಮ್ ಸೀಡರ್ | ಪ್ರತಿ ಘಟಕಕ್ಕೆ ರೂ.1500/– |
| | ಐ) ರೋಟೋವೇಟರ್ | ಪ್ರತಿ ಘಟಕಕ್ಕೆ ರೂ.35000/– |
| | ಒ) ಲೇಸರ್ ಲ್ಯಾಂಡ್ ಲೆವೆಲರ್ | ಪ್ರತಿ ಘಟಕಕ್ಕೆ ರೂ.1,50,000/– |
| | ಔ)ಭತ್ತದ ಒಕ್ಕಣೆ ಯಂತ್ರ/ ಬಹು ಬೆಳೆ ಒಕ್ಕಣೆ ಯಂತ್ರ | ಪ್ರತಿ ಘಟಕಕ್ಕೆ ರೂ.40000/– |
| | ಅಂ)ಸೆಲ್ಫ್ ಪ್ರೊಪೆಲ್ಡ್ ಭತ್ತದ ನಾಟಿ ಯಂತ್ರ | ಪ್ರತಿ ಘಟಕಕ್ಕೆ ರೂ.75000/– |

| | | |
|---|---|---|
| 5 | **ಸಮರ್ಥ ನೀರಾವರಿ ಸಾಧನಗಳು**<br><br>ಅ) ಪಂಪ್ ಸೆಟ್‌ಗೆ ಪ್ರೋತ್ಸಾಹ ಧನ | ಪ್ರತಿ ಘಟಕಕ್ಕೆ ರೂ.10000/– |
| | ಆ) ನೀರು ಒದಗಿಸುವ ಪೈಪುಗಳು | ಪ್ರತಿ ಘಟಕಕ್ಕೆ ರೂ.15000/–<br>ಅಥವಾ ಪ್ರತಿ ಮೀಟರ್ ಗೆ<br>ರೂ.25/–, ಗರಿಷ್ಠ 600 ಮೀ. |
| 6 | **ಬೆಳೆ ಪದ್ಧತಿ ಆಧಾರಿತ ತರಬೇತಿಗಳು** | ಪ್ರತಿ Session ಗೆ ರೂ. 3500/–<br>ಪ್ರತಿ ತರಬೇತಿಗೆ ರೂ.14000/– |
| 7 | **ಸ್ಥಳೀಯ ಪ್ರೇರಕಗಳು** | |
| | ಅ) ಹಸಿರೆಲೆ ಗೊಬ್ಬರ ಬೀಜ ವಿತರಣೆ | ಶೆ.50 ರ ರಿಯಾಯಿತಿ, ಗರಿಷ್ಠ ಪ್ರತಿ ಹೆಕ್ಟೇರ್ ಗೆ ರೂ.2000/– |
| | ಆ) ಕೇಜ್ ವ್ಹೀಲ್ ವಿತರಣೆ | ಶೆ.50 ರ ರಿಯಾಯಿತಿ, ಗರಿಷ್ಠ ಪ್ರತಿ ಘಟಕಕ್ಕೆ ರೂ.12000/– |
| | ಇ) ಪವರ್ ರೀಪರ್ ವಿತರಣೆ | ಶೆ.50 ರ ರಿಯಾಯಿತಿ, ಗರಿಷ್ಠ ಪ್ರತಿ ಘಟಕಕ್ಕೆ ರೂ.41000/– |
| | ಋ) **ಕೊಯ್ಲೋತ್ತರ ತಾಂತ್ರಿಕತೆ–ಉಪಕರಣಗಳ ವಿತರಣೆ**<br>1) ಮಿನಿ ರೈಸ್ ಮಿಲ್ | ಶೇ. 50 ರ ರಿಯಾಯಿತಿ ದರದಲ್ಲಿ ಗರಿಷ್ಠ ರೂ. 97500/– ಗಳವರೆಗೆ ಯಾವುದು ಕಡಿಮೆಯೋ ಆ ದರ |
| | 2) ಫ್ಲೋರ್ ಮಿಲ್/ಪಲ್ವರೈಸರ್‌ಗಳ ವಿತರಣೆ | ಶೇ. 50 ರ ರಿಯಾಯಿತಿ ದರದಲ್ಲಿ ಗರಿಷ್ಠ ರೂ. 30000/– ಗಳವರೆಗೆ ಯಾವುದು ಕಡಿಮೆಯೋ ಆ ದರ |

**ಸೂಚನೆ:**

**1. ಎನ್.ಎಫ್.ಎಸ್.ಎಂ ಯೋಜನೆಯ ಕಾರ್ಯಕ್ರಮಗಳಡಿ ಲಭ್ಯವಿರುವ ಲಘು ಪೋಷಕಾಂಶಗಳ ವಿತರಣೆಯನ್ನು ಭೂ ಸಮೃದ್ಧಿ (ಭೂ ಚೇತನ ಪ್ಲಸ್) ಯೋಜನೆಯ ಪ್ರಾತ್ಯಕ್ಷಿಕೆಗಳಡಿ ಹಾಗೂ ಭೂ ಚೇತನ ಯೋಜನೆಯ ಲಘು ಪೋಷಕಾಂಶಗಳ ವಿತರಣೆ ಘಟಕಗಳಡಿ ಸಮನ್ವಯ ಸಾಧಿಸಿ ಅನುಷ್ಠಾನಗೊಳಿಸುವುದು.**

**2. ಸಂಪನ್ಮೂಲ ಸಂರಕ್ಷಣಾ ತಾಂತ್ರಿಕತೆಗಳು/ ಸಾಧನಗಳು ಮತ್ತು ಕೊಯ್ಲೋತ್ತರ ತಾಂತ್ರಿಕತೆ–ಉಪಕರಣಗಳ ವಿತರಣೆ ಘಟಕಗಳಡಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಕೇಂದ್ರ ಮತ್ತು ರಾಜ್ಯ ವಲಯ ಯೋಜನೆಗಳ ಅನುದಾನವನ್ನು ಸಮನ್ವಯಗೊಳಿಸಬಹುದಾಗಿದೆ.**

**ಎನ್‌ಎಫ್‌ಎಸ್‌ಎಂ–ಅಕ್ಕಿ :**

**1. ಗುಚ್ಛ ಪ್ರಾತ್ಯಕ್ಷಿಕೆಗಳ ಪ್ರೇರಕಗಳು ಮತ್ತು ಮಾಡಬಹುದಾದ ವೆಚ್ಚ**

**ಅ. ನೇರ ಬಿತ್ತನೆ ಗುಚ್ಛ ಪ್ರಾತ್ಯಕ್ಷಿಕೆ**

| ಕ್ರ.ಸಂ. | ಪ್ರೇರಕಗಳ ವಿವರ | ಪ್ರತಿ ಹೆಕ್ಟೇರ್‌ಗೆ ವೆಚ್ಚ (ರೂ.ಗಳಲ್ಲಿ) |
|---|---|---|
| 1. | ಬಿತ್ತನೆ ಬೀಜ–80 ಕಿ.ಗ್ರಾಂ( ರೂ.30/ಕಿ.ಗ್ರಾಂ.) | 2400 |
| 2. | ಬೀಜೋಪಚಾರ ಔಷಧಿ | 150 |
| 3. | ಜೈವಿಕ ಗೊಬ್ಬರ | 300 |
| 4. | ಲಘು ಪೋಷಕಾಂಶಗಳು | 800 |
| 5. | ಕಳೆ ನಿಯಂತ್ರಣ | 800 |
| 6. | ಎಲೆಗಳ ಮೇಲೆ ಪೋಷಕಾಂಶಗಳ ಸಿಂಪರಣೆ | 550 |
| 7. | ಸಸ್ಯ ಸಂರಕ್ಷಣೆ | 800 |
| 8. | ಭೂಮಿ ಉಳುಮೆ ಇತ್ಯಾದಿಗಳಿಗೆ ಬಾಡಿಗೆ ಸೇವಾ ಶುಲ್ಕಗಳು | 900 |
| 9. | ಕ್ಷೇತ್ರೋತ್ಸವ/ರೈತರ ಗೋಷ್ಠಿ (100 ಹೆಕ್ಟೇರ್ ಗುಚ್ಛಕ್ಕೆ ತಗಲುವ ಒಟ್ಟು ವೆಚ್ಚ ರೂ.25000/–) | 250 |
| 10. | ಪ್ರಚಾರ ಸಾಮಗ್ರಿಯ ವಿತರಣೆ ಮತ್ತು ಪ್ರಾತ್ಯಕ್ಷಿಕೆಯ ವಿವರಣಾ ಫಲಕ (100/– ಗುಚ್ಛಕ್ಕೆ ಪ್ರಚಾರ ಸಾಮಗ್ರಿಯ ವಿತರಣೆಗೆ ತಗಲುವ ಒಟ್ಟು ವೆಚ್ಚ ರೂ.22500/– ಹಾಗೂ ಪ್ರಾತ್ಯಕ್ಷಿಕೆಯ ವಿವರಣಾ ಫಲಕ ತಗಲುವ ವೆಚ್ಚ ರೂ.2500/–)(ಪ್ರತಿ ಹೆಕ್ಟೇರ್‌ಗೆ ಅನುಕ್ರಮವಾಗಿ ರೂ.225/– ಹಾಗೂ ರೂ.25/– ರಂತೆ) | 250 |
| 11. | ವಿಜ್ಞಾನಿಗಳ /ಕೇಂದ್ರ ಸರ್ಕಾರದ ಅಧಿಕಾರಿಗಳ/ಯೋಜನೆ ಉಸ್ತುವಾರಿ ತಂಡ/ರಾಜ್ಯ ಸರ್ಕಾರದ ಅಧಿಕಾರಿಗಳ ಭೇಟಿಗೆ ಟ್ಯಾಕ್ಸಿ ಬಾಡಿಗೆ ಮತ್ತು ಪೆಟ್ರೋಲ್ ವೆಚ್ಚಕ್ಕೆ (ಯಾವುದೇ ರೀತಿಯ ಪ್ರವಾಸ/ತುಟ್ಟಿ ಭತ್ಯೆ ಹೊರತುಪಡಿಸಿ) ಪ್ರತಿ ಭೇಟಿಗೆ | 300 |
| | **ಒಟ್ಟು** | **7500** |

**ಆ. SRI ಮಾದರಿ ಗುಚ್ಛ ಪ್ರಾತ್ಯಕ್ಷಿಕೆ**

| ಕ್ರ.ಸಂ. | ಪ್ರೇರಕಗಳ ವಿವರ | ಪ್ರತಿ ಹೆಕ್ಟೇರ್‌ಗೆ ವೆಚ್ಚ (ರೂ.ಗಳಲ್ಲಿ) |
|---|---|---|
| 1. | ಬಿತ್ತನೆ ಬೀಜ–8 ಕಿ.ಗ್ರಾಂ( ರೂ.30/ಕಿ.ಗ್ರಾಂ.) | 240 |
| 2. | ಬೀಜೋಪಚಾರ ಔಷಧಿ | 150 |
| 3. | ಜೈವಿಕ ಗೊಬ್ಬರ | 300 |
| 4. | ಲಘು ಪೋಷಕಾಂಶಗಳು | 800 |
| 5. | ಜೈವಿಕ ಕೀಟನಾಶಕ/ಕಳೆನಾಶಕ/ಸಸ್ಯ ಸಂರಕ್ಷಣೆ | 1860 |
| 6. | ಚೌಕ ಬಿತ್ತನೆ ಮತ್ತು ಯಾಂತ್ರೀಕೃತ ಕಳೆ ನಿವಾರಣೆ | 2850 |
| 7. | ಎಲೆಗಳ ಮೇಲೆ ಪೋಷಕಾಂಶಗಳ ಸಿಂಪರಣೆ | 500 |
| 8. | ಕ್ಷೇತ್ರೋತ್ಸವ/ರೈತರ ಗೋಷ್ಠಿ(100 ಹೆಕ್ಟೇರ್ ಗುಚ್ಛಕ್ಕೆ ತಗಲುವ ಒಟ್ಟು ವೆಚ್ಚ ರೂ.25000/–) | 250 |

| | | |
|---|---|---|
| 9. | ಪ್ರಚಾರ ಸಾಮಗ್ರಿಯ ವಿತರಣೆ ಮತ್ತು ಪ್ರಾತ್ಯಕ್ಷಿಕೆಯ ವಿವರಣಾ ಫಲಕ (100/- ಗುಚ್ಛಕ್ಕೆ ಪ್ರಚಾರ ಸಾಮಗ್ರಿಯ ವಿತರಣೆಗೆ ತಗಲುವ ಒಟ್ಟು ವೆಚ್ಚ ರೂ.22500/- ಹಾಗೂ ಪ್ರಾತ್ಯಕ್ಷಿಕೆಯ ವಿವರಣಾ ಫಲಕ ತಗಲುವ ವೆಚ್ಚ ರೂ.2500/-) (ಪ್ರತಿ ಹೆಕ್ಟೇರ್‌ಗೆ ಅನುಕ್ರಮವಾಗಿ ರೂ.225/- ಹಾಗೂ ರೂ.25/-ರಂತೆ) | 250 |
| 10. | ವಿಜ್ಞಾನಿಗಳ /ಕೇಂದ್ರ ಸರ್ಕಾರದ ಅಧಿಕಾರಿಗಳ/ಯೋಜನೆ ಉಸ್ತುವಾರಿ ತಂಡ/ರಾಜ್ಯ ಸರ್ಕಾರದ ಅಧಿಕಾರಿಗಳ ಭೇಟಿಗೆ ಟ್ಯಾಕ್ಸಿ ಬಾಡಿಗೆ ಮತ್ತು ಪೆಟ್ರೋಲ್ ವೆಚ್ಚಕ್ಕೆ (ಯಾವುದೇ ರೀತಿಯ ಪ್ರವಾಸ/ತುಟ್ಟಿ ಭತ್ಯೆ ಹೊರತುಪಡಿಸಿ) ಪ್ರತಿ ಭೇಟಿಗೆ | 300 |
| | **ಒಟ್ಟು** | **7500** |

ಇ. **<u>ಸಂಕರಣ ಅಕ್ಕಿ ಬೆಳೆ ಗುಚ್ಛ ಪ್ರಾತ್ಯಕ್ಷಿಕೆ</u>**

| ಕ್ರ. ಸಂ. | ಪ್ರೇರಕಗಳ ವಿವರ | ಪ್ರತಿ ಹೆಕ್ಟೇರ್‌ಗೆ ವೆಚ್ಚ (ರೂ.ಗಳಲ್ಲಿ) |
|---|---|---|
| 1. | ಬಿತ್ತನೆ ಬೀಜ-20 ಕಿ.ಗ್ರಾಂ( ರೂ.140/ಕಿ.ಗ್ರಾಂ.) | 2800 |
| 2. | ಲಘು ಪೋಷಕಾಂಶಗಳು | 800 |
| 3. | ನಗರ ಕಾಂಪೋಸ್ಟ್/ಎರೆಹುಳು ಗೊಬ್ಬರ | 1000 |
| 4. | ಯಾಂತ್ರೀಕೃತ ಬಿತ್ತನೆ | 1600 |
| 5. | ಕೋನೋವೀಡರ್ ಬಳಕೆ | 500 |
| 6. | ಕ್ಷೇತ್ರೋತ್ಸವ/ರೈತರ ಗೋಷ್ಠಿ(100 ಹೆಕ್ಟೇರ್ ಗುಚ್ಛಕ್ಕೆ ತಗಲುವ ಒಟ್ಟು ವೆಚ್ಚ ರೂ.25000/-) | 250 |
| 7. | ಪ್ರಚಾರ ಸಾಮಗ್ರಿಯ ವಿತರಣೆ ಮತ್ತು ಪ್ರಾತ್ಯಕ್ಷಿಕೆಯ ವಿವರಣಾ ಫಲಕ (100/- ಗುಚ್ಛಕ್ಕೆ ಪ್ರಚಾರ ಸಾಮಗ್ರಿಯ ವಿತರಣೆಗೆ ತಗಲುವ ಒಟ್ಟು ವೆಚ್ಚ ರೂ.22500/- ಹಾಗೂ ಪ್ರಾತ್ಯಕ್ಷಿಕೆಯ ವಿವರಣಾ ಫಲಕ ತಗಲುವ ವೆಚ್ಚ ರೂ.2500/-) (ಪ್ರತಿ ಹೆಕ್ಟೇರ್‌ಗೆ ಅನುಕ್ರಮವಾಗಿ ರೂ.225/- ಹಾಗೂ ರೂ.25/- ರಂತೆ) | 250 |
| 8. | ವಿಜ್ಞಾನಿಗಳ /ಕೇಂದ್ರ ಸರ್ಕಾರದ ಅಧಿಕಾರಿಗಳ/ಯೋಜನೆ ಉಸ್ತುವಾರಿ ತಂಡ/ರಾಜ್ಯ ಸರ್ಕಾರದ ಅಧಿಕಾರಿಗಳ ಭೇಟಿಗೆ ಟ್ಯಾಕ್ಸಿ ಬಾಡಿಗೆ ಮತ್ತು ಪೆಟ್ರೋಲ್ ವೆಚ್ಚಕ್ಕೆ (ಯಾವುದೇ ರೀತಿಯ ಪ್ರವಾಸ/ತುಟ್ಟಿ ಭತ್ಯೆ ಹೊರತುಪಡಿಸಿ) ಪ್ರತಿ ಭೇಟಿಗೆ | 300 |
| | **ಒಟ್ಟು** | **7500** |

**ಈ. <u>ಸಾಲು ಬಿತ್ತನೆ ಗುಚ್ಛ ಪ್ರಾತ್ಯಕ್ಷಿಕೆ</u>**

| ಕ್ರ. ಸಂ. | ಪ್ರೇರಕಗಳ ವಿವರ | ಪ್ರತಿ ಹೆಕ್ಟೇರ್‌ಗೆ ವೆಚ್ಚ (ರೂ.ಗಳಲ್ಲಿ) |
|---|---|---|
| 1. | ಬಿತ್ತನೆ ಬೀಜ–62 ಕಿ.ಗ್ರಾಂ( ರೂ.30/ಕಿ.ಗ್ರಾಂ.) | 1860 |
| 2. | ಬೀಜೋಪಚಾರ ಔಷಧಿ | 150 |
| 3. | ಜೈವಿಕ ಗೊಬ್ಬರ | 340 |
| 4. | ಲಘು ಪೋಷಕಾಂಶಗಳು | 800 |
| 5. | ಕಳೆ ನಿಯಂತ್ರಣ | 1000 |
| 6. | ಎಲೆಗಳ ಮೇಲೆ ಪೋಷಕಾಂಶಗಳ ಸಿಂಪರಣೆ | 550 |
| 7. | ಸಸ್ಯ ಸಂರಕ್ಷಣೆ | 1000 |
| 8. | ಭೂಮಿ ಉಳುಮೆ ಇತ್ಯಾದಿಗಳಿಗೆ ಬಾಡಿಗೆ ಸೇವಾ ಶುಲ್ಕಗಳು | 1000 |
| 9. | ಕ್ಷೇತ್ರೋತ್ಸವ/ರೈತರ ಗೋಷ್ಠಿ(100 ಹೆಕ್ಟೇರ್ ಗುಚ್ಛಕ್ಕೆ ತಗಲುವ ಒಟ್ಟು ವೆಚ್ಚ ರೂ.25000/–) | 250 |
| 10. | ಪ್ರಚಾರ ಸಾಮಗ್ರಿಯ ವಿತರಣೆ ಮತ್ತು ಪ್ರಾತ್ಯಕ್ಷಿಕೆಯ ವಿವರಣಾ ಫಲಕ (100/– ಗುಚ್ಛಕ್ಕೆ ಪ್ರಚಾರ ಸಾಮಗ್ರಿಯ ವಿತರಣೆಗೆ ತಗಲುವ ಒಟ್ಟು ವೆಚ್ಚ ರೂ.22500/– ಹಾಗೂ ಪ್ರಾತ್ಯಕ್ಷಿಕೆಯ ವಿವರಣಾ ಫಲಕ ತಗಲುವ ವೆಚ್ಚ ರೂ.2500/–)(ಪ್ರತಿ ಹೆಕ್ಟೇರ್‌ಗೆ ಅನುಕ್ರಮವಾಗಿ ರೂ.225/– ಹಾಗೂ ರೂ.25/– ರಂತೆ) | 250 |
| 11. | ವಿಜ್ಞಾನಿಗಳ /ಕೇಂದ್ರ ಸರ್ಕಾರದ ಅಧಿಕಾರಿಗಳ/ಯೋಜನೆ ಉಸ್ತುವಾರಿ ತಂಡ/ರಾಜ್ಯ ಸರ್ಕಾರದ ಅಧಿಕಾರಿಗಳ ಭೇಟಿಗೆ ಟ್ಯಾಕ್ಸಿ ಬಾಡಿಗೆ ಮತ್ತು ಪೆಟ್ರೋಲ್ ವೆಚ್ಚಕ್ಕೆ(ಯಾವುದೇ ರೀತಿಯ ಪ್ರವಾಸ/ತುಟ್ಟಿ ಭತ್ಯೆ ಹೊರತುಪಡಿಸಿ) ಪ್ರತಿ ಭೇಟಿಗೆ | 300 |
| | **ಒಟ್ಟು** | **7500** |

**2. ಭತ್ತದ ಬೆಳೆ ಬದುಗಳ ಮೇಲೆ ತೊಗರಿ ಬಿತ್ತನೆ ಗುಚ್ಛ ಪ್ರಾತ್ಯಕ್ಷಿಕೆ**

**ಅ. <u>ಭತ್ತ ನೇರ ಬಿತ್ತನೆ ಮತ್ತು ಬದುಗಳ ಮೇಲೆ ತೊಗರಿ ಬಿತ್ತನೆ ಗುಚ್ಛ ಪ್ರಾತ್ಯಕ್ಷಿಕೆ</u>**

| ಕ್ರ. ಸಂ. | ಪ್ರೇರಕಗಳ ವಿವರ | ಪ್ರತಿ ಹೆಕ್ಟೇರ್‌ಗೆ ವೆಚ್ಚ (ರೂ.ಗಳಲ್ಲಿ) |
|---|---|---|
| 1. | ಬಿತ್ತನೆ ಬೀಜ–80 ಕಿ.ಗ್ರಾಂ( ರೂ.30/ಕಿ.ಗ್ರಾಂ.) | 2400 |
| 2. | ತೊಗರಿ ಬೀಜ–2 ಕಿ.ಗ್ರಾಂ( ರೂ.90/ಕಿ.ಗ್ರಾಂ.) | 180 |
| 3. | ಬೀಜೋಪಚಾರ ಔಷಧಿ | 170 |
| 4. | ಜೈವಿಕ ಗೊಬ್ಬರ | 300 |
| 5. | ಲಘು ಪೋಷಕಾಂಶಗಳು | 600 |
| 6. | ಕಳೆ ನಿಯಂತ್ರಣ | 700 |
| 7. | ಎಲೆಗಳ ಮೇಲೆ ಪೋಷಕಾಂಶಗಳ ಸಿಂಪರಣೆ | 450 |
| 8. | ಸಸ್ಯ ಸಂರಕ್ಷಣೆ | 1000 |
| 9. | ಭೂಮಿ ಉಳುಮೆ ಇತ್ಯಾದಿಗಳಿಗೆ ಬಾಡಿಗೆ ಸೇವಾ ಶುಲ್ಕಗಳು | 900 |

| | | |
|---|---|---|
| 10. | ಕ್ಷೇತ್ರೋತ್ಸವ/ರೈತರ ಗೋಷ್ಠಿ(100 ಹೆಕ್ಟೇರ್ ಗುಚ್ಛಕ್ಕೆ ತಗಲುವ ಒಟ್ಟು ವೆಚ್ಚ ರೂ.25000/–) | 250 |
| 11. | ಪ್ರಚಾರ ಸಾಮಗ್ರಿಯ ವಿತರಣೆ ಮತ್ತು ಪ್ರಾತ್ಯಕ್ಷಿಕೆಯ ವಿವರಣಾ ಫಲಕ((100/– ಗುಚ್ಛಕ್ಕೆ ಪ್ರಚಾರ ಸಾಮಗ್ರಿಯ ವಿತರಣೆಗೆ ತಗಲುವ ಒಟ್ಟು ವೆಚ್ಚ ರೂ.22500/– ಹಾಗೂ ಪ್ರಾತ್ಯಕ್ಷಿಕೆಯ ವಿವರಣಾ ಫಲಕ ತಗಲುವ ವೆಚ್ಚ ರೂ.2500/–)(ಪ್ರತಿ ಹೆಕ್ಟೇರ್‌ಗೆ ಅನುಕ್ರಮವಾಗಿ ರೂ.225/– ಹಾಗೂ ರೂ.25/– ರಂತೆ) | 250 |
